ಎಂದಲ್ಲಿ ಪೇಳ್ದು ಮತ್ತಾ ಮರಕ್ಕೆಯ್ತಂದು
ಇಂದುಧರನಿರ[14]ಲಲ್ಲಿ[14] ನಂಬಿಯಣ್ಣಂ ಬಂದು |
ಸೂ[15]ರುಳಲ್ಕೆಂ[15]ದು ದೇವಾಲಯದ ಮುಂದಿರಲು
ನಾರಿಯರ್ ವೆರ[16]ಸು[16] ಸಂಕಿಲಿಯ ತಾ[17]ಯ್ ನಡೆ[17]ತರಲು |
ಕಂಡಲ್ಲಿ ನಂಬಿಯಣ್ಣಂ [18]ಬೆವಸ್ಥೆಗೆ ನಿಂದು[18]
ಖಂಡೇಂದುಮೌಳಿ ಮಾಡಿದನೆ ಇಂತಿದ[19]ಸೆಂದು[19] |

---

1 ಯೆ (ಕಗಚ). 2 ತಿ (ಖ), ತೀ (ಗ). 3 ಬೆನಕನು ಸ್ವಾಮಿ ಕಾರ್ತಿಕನು ದೇವಿಯುಂ (ಗ), ವುಂ ಗಣಪನುಂ ಸ್ವಾಮಿ ಕಾರ್ತಿಕನುಂ (ಚ). 4 ಮೇನಕಾತ್ಮಜೆ ವೀರಭದ್ರ ನಂದೀಶನುಂ| ಇಲ್ಲಿಂದ ಮರದಡಿಯೊಳಿಪ್ಪುದೆನೆಗಾಗಿಯುಂ | ನಲ್ಲಿಂದ ಬಿನ್ನಪವ ಕೇಳು ಲೇಸಾಗಿಯುಂ | (ಚ). 5 ದೊಳಗೆಯಿಪ್ಪು (ಖ), ನಡಿ - - - (ಜ). 6 ತ ಈ (ಕ), ತೀ (ಖ), ತಲೀ (ಚಜ). 7 ನ (ಜ). 8 ಯೊಳಂದ (ಖಗಚ). 9 ರುತ (ಗಚ). 10 ತ್ವರಿತದಿಂ ಸೌಂದರನನಿ (ಖ), ಬರುತ ಸೌಂದರನ ನೆಱೆಯ (ಚ). 11 ಯಲಿ (ಖಗಚ). 12 ನ (ಕಜ). 13 ದಿಂ (ಕ), ದಿದು (ಚ). 14 ಲಿತ್ತ (ಖಗಚ). 15 ರುಳಕ್ಕೆಂ (ಕ), ರಿಳಲ್ಕೆಂ (ಖ). 16 ಸುತುಂ (ಕ), ಸಿ (ಖಗಜ). 17 ಯಿ ಬರು (ಖ), ಯಿಯ್ಯೆ (ಗ), ಯೆಯಿ (ಚ). 18 ಬೆವಸ್ಥೆ - - - (ಕ), ವವಸ್ತೆಗೆ ಸಲಲು (ಖ), ವೆವಸ್ತೆ - - - (ಗ), ಬೆವಸ್ತೆಗೆ ನಿದು (ಜ). 19 ನೆನಲು (ಖ).

ನಿಂದಿರಲ್ ಸಂಕಿಲಿಯ ಮಾತೆ ನಲವಿಂ ಬಂದು
[1]ಎಂದಳ[1]ಳಿಯಂಗೆ ಸಾಱುತ್ತೆ ದೂರದಿ ನಿಂದು |
[2]ಎಮ್ಮ[2] ಸಂಕಿಲಿ[3]ಯ[3] ಪತಿಯಾದಂ[4]ದೆ[4] ಬೇಱಿಲ್ಲ
[5]ನಿಮ್ಮ ನಿಲ್ಲಿಗೆ ತ್[5]ಪ್ಪುದಿಂ[6]ತೆ[6]ಮಗುಚಿತ[7]ವ[7]ಲ್ಲ |
ಆದೊಡೇಸೀ ಮಹಾಸ್ಥಾನಂಗಳೊಳ್ ಬೇಡ
ಆದ [8]ಪೊಲ್ಲವೆ[8] ಲೇಸು [9]ಯೆ[9]ಮಗೆ [10]ಸರಿಯಿದು ಬೇಡ[10] |
ಈ ಶಿವಾಲಯದ ಮುಂದಣ ಮರ[11]ದ[11]ಡಿಗೆ ಬಂದು
ಈಶನಱಿಯಲ್ ಬಿಡೆಂ ಸಂಕಿಲಿಯ[12]ನಿನ್ನೆಂ[12]ದು |
ಶಿವನಾಜ್ಞೆಯಂ ನೀವೆ ಕೈಕೊಂಡು ನುಡಿವುದೆನೆ
ಶಿವನೆ ಬಲ್ಲಂ ಬಳಿ[13]ಕ್ಕಾದು[13]ದಂ ಕಾ[14]ಣ್ಬೆವೆ[14]ನೆ |
ಕೋಪಿಸುತೆ ಸಿಡಿಮಿಡಿಗೊ[15]ಳು[15]ತ್ತೆ ಸೌಂದರನಲ್ಲಿ
ತಾಪಿಸು[16]ತವೆಯ್ದಿ[16]ಸದೆ ನಡೆತಂದು [17]ಮರದ[17]ಲ್ಲಿ |
ನಿಂದವರ್ ನೆರೆದವರ್ ನೋಡೆ ಲಜ್ಜೆಯನುಳಿದು
ಇಂದುಧರನಲ್ಲಿ ನೋಡುತ್ತೆ ನಗುತಿರೆ ಮುಳಿದು |
ನೋಡು[18]ತಿರೆ[18] ನಂಬಿಯಣ್ಣಂ ನುಡಿದನಂತಲ್ಲಿ
[19]ನಾಡೆ[19] ಸಂಕಿಲಿಯನಗಲೆಂ ಬಿಡೆಂ ಬಿಡೆನಿಲ್ಲಿ |
ಇದಕೆ ಶಿವನಾಜ್ಞೆ ಶಿವನೇ ಬಲ್ಲನೆನುತ[20]ಲ್ಲಿ[20]
ಮದವ[21]ಳಿ[21]ಗನತ್ತೆಯರ ಮುಂದೆ ನೂ[22]ರುಳಲ[22]ಲ್ಲಿ |

---

1 ಹೆಂದದ (ಕ), ಯೆಂದ (ಚ). 2 ಏನಿ (ಕ), ಯಂದು (ಗ). 3 ಗೆ (ಚಜ). 4 ತೆ (ಖ). 5 ನೀ ನಿಲ್ಲಿಗೆಯ್ತು (ಕ), ನಿಮ್ಮಲ್ಲಿಗೈತ (ಖಗ), ನಿಮ್ಮನೆಯ್ತು (ಚ). 6 ದ (ಖಚ). 7 ತಾನ (ಚ). 8 ಸೊಲವೆ (ಕ), ಸೋಲಲು (ಖ), ಸೊಲ್ಲವೆ (ಗ). 9 ಯ (ಕ), ನ (ಖ), ವೆ (ಗಚ). 10 ಪರಿಯಿದು ನೋಡಾ (ಗ) ; [ಪರಿಯಿದು ಬೇಡ] ? 11 ನ (ಖ). 12 ನಿನೆಂ (ಕ), ನಾನಂ (ಖ). 13 ಕವಾವು (ಗ), ಕವಾದು (ಚ). 14 ಣ್ಬೆನೆ (ಕಗ), ಣ್ಬುದೆ (ಖ). 15 ಡು (ಕ). 16 ತವೇಡಿ (ಖ), ತವೆಯಿದಿ (ಗಚ), ತ್ತೆಯ್ದಿ (ಜ). 17 ಮರನ (ಕ), ಬಂದಿ (ಗ). 18 ತಂ (ಖಚ), ತ್ತ (ಗ). 19 ಕೂಡಿ<ದೆ> (ಖಗ). 20 ತವಕದೊಳು (ಗ). 21 ಳಿ (ಖ). 22 ರಿಡಲ (ಖ), ರುಳನ (ಚ).

ನಸುನಗುತೆ ದೇವರಿ[1]ನ್ನುಂ ಪೋಪೆವೇ[1] ಮಗನೆ
ಹಸನಾಯ್ತು ನಿನ್ನ ಹಜ್ಜೆ ನಿನ್ನ ಕೊಳಲೆಲೆ ಮಗನೆ|
ಎನಲದಂ ಕೇಳದಂತಱಿಯದಂತೆಯ್ತಂದು
ಮನವೊಸೆದು ರಂಗಮಂಟಪದ ಮಧ್ಯದೆ ನಿಂದು|
ದಿನದಿನಕೆ ಸಾವಿರಚ್ಚುಂ [2]ಶರ್ವನಂ[2] ಜೇಡಿ [3]+
ತನಗೆಸೆವ ತುಂಬುರನ[4]ನಭವಗ[4]ಪ್ಪಣೆ ಮಾಡಿ|
ಮನಸಿಜನ[5]ನಿಳಿಕೆಯ್ವ[5] ಸಿಂಗರಂ ಮಾಡುತುಂ
ತನತನಗೆ ನಲಿವ ಕರಣಂಗಳೊಡಗೂಡುತುಂ|
ಮುಂದುವರಿವಿಂದ್ರಿಯಂಗಳನಗಲದೋವುತುಂ
ಸಂದಣಿಪ ತವಕಮುಂ ತಲೆದಡ[6]ವಿ[6] ಪೆರ್ಚುತುಂ| ೧೧೦
ಸುಕುಮಾರಶೇಖರಂ ಸಿಂಗರದೊಳೊಪ್ಪಿದಂ
ಸಕಲಗುಣಶರಧಿ ಸೌಂದರನಾಗಳೊಪ್ಪಿದಂ||

ತ್ರಯೋದಶ ಸ್ಥಲಂ

[1] ನ್ನೊಳಪೊಗುವೆನೆ (ಖ), - - - ಪೆವೆಲೆ (ಗ), - - - ಪೆನೇ (ಚ). [2] ಸರ್ವನಂ (ಖ), ಡೇವರಂ (ಗಚ). [3] + ಮನವೊಲಿದು ನಲಿದು ನಾಟಿಯೊಳು ಸಲೆ ನೆಲೆ ಪಾಡಿ| ತನಗೆ ಪೊಂನ ಸಾ(?)ಗಳ್ಕೆ ಮುಂನವರ್ಪಿತಮಾಡಿ| ತಾನಲುಂ ದೇವರುಂ ಸುಖರಸದೊಳೋಲಾಡಿ| ದಿನಕೆ ಸಾವಿರ ಹೊಂನ ಕೊಡುವೆನೆಂದೋಲಾಡಿ| (ಚ). [4] ದೇವರ (ಗಚ). [5] ನಿಳಯಕ್ಕೆ (ಗ). [6] ಹಿ (ಗ).

೧೪ನೆಯ ಸ್ಥಲ

ಕಾರ ಮುಗಿಲ್ಗೆ ಚಾದಗೆ ವನಕ್ಕೆ ಪಿಕಂ ಕುಸುಮಕ್ಕೆ ಷಟ್ಪದಂ
ವಾರಿರುಹಕ್ಕಿನಂ ಕುವಲಯಕ್ಕಮೃತಾಂಶು ಕೊಳಕ್ಕೆ [1]ಹಂ[1]ಸೆ ವಿ- |
ಸ್ತಾರ[2]ಫಳಕ್ಕೆ[2] ರಾಜಶುಕನೀಶ್ವರಭಕ್ತಿಗೆ ಭಕ್ತನಾಸೆ ಮಾ-
ಳ್ಪೋರಗೆಯಾಗಿ ಸಂಕಿಲಿ[3]ಯೊಳಂ[3] ನೆರೆವಾಸೆಯೊಳಿರ್ದ ಸೌಂದರಂ ||

ಅಂತಿರ್ದಿರಲಾಱದೆ ಕಾಮಕುತೂಹಳಚಿತ್ತಂ ನಂಬಿಯಣ್ಣಂ ತುಂಬುರನ ಕೈವಿಡಿದು [4]ನಡೆದು[4] ಬರುತಿರೆ ವಸಂತರಾಜಂಗೆ ಮ[5]ಧು[5]ದೂತಿಯಿದಿರ್ವಪ್ಪಂತೆ ರತಿಮಂಗ[6]ಳೆ[6] ವಿಳಾಸಿನಿ ಶಿವದೇವಿ[7]ಯ[7]ನುಮತದಿಂದಿರ್ವಂದು ದೇವ ಬಿಜಯಂಗೆಯ್ವುದೆಂದು ಬಿನ್ನೈಸೆ ನಡೆತಂ[8]ದರ[8]ಮನೆ[9]ಯೊಳಗಂ[9] ಕಳಿದು [10]ಕೇಳೀವನದ[10] ಕೃತಕಾಚಳದ [11]ನಡುವಣ[11] ವಜ್ರದ ಮುಚ್ಚಳ ಸೆಜ್ಜೆ[12]ಯ ಮನೆ[12]ಯ ಹಂಸತೂಳದ ತಣ್ಣೆಳಲ [13]ತಳ್ಪದೊಳ್[13] ಬಿಜಯಂಗೆಯ್ದು ಗಳಗಳನೆ ತಿರುಗಿ [14]ಬಂದು[14] ಸಖೀಜನಂಗಳ ನಡುವೆ ಹೂವಿನ [15]ಹಸೆ[15]ಯೊಳುಸುರಂ ಪಿಡಿದಿರ್ದ ಸಂಕಿಲಿ[16]ಯು[16]ಲ್ಲಿಗೆ ಬಂದೇಳೇಳ್ ನಿನ್ನ ಮನೋರಥಂ ಸೆಜ್ಜೆ[17]ಯ ಮ[17]ನೆ[18]ಯೊಳಾಸೆಗೆಯ್ವುತ್ತ[18]ದೆ ನಡೆಯೆಂದು ನುಡಿಯಲೊಡನೆ ಹರಣಂ ಬಂದು [19]ಕರಣಂ[19] ಕಳೆಯೇಱು ಘಳಿಲನೆದ್ದು[20]ಕುಳ್ಳಿರ್ದ[20] ಸಂಕಿಲಿನಾಚಿಯರಂ ರತಿಮಂಗಳೆ ಸಿಂಗರಿಸಲ್ ಮನಂದಂದು ಮತ್ತಮಿಂತೆಂದಳ್-

[21]ಎಲೆ[21] ಮುಗ್ಧೆ ನಿನ್ನವಯವಂಗಳ ಚೆಲ್ವಿಂಗಾಭರಣಂ ಮಱೆ ನಿನ್ನ

---

[1] ಪಂ (ಕ). [2] ದಿ ಪಣ್ಗೆ (ಚ). [3] ಯರೊಳ್ (ಕ). [4] (ಚ) ದಲ್ಲಿಲ್ಲ. [5] ದನ (ಕಖಗಚ). [6] ಳ (ಗ), ಳಿಯೆಂಬ (ಚ), ಲೆ (ಜ). [7] ಯರಸನ (ಖ), ಯನ (ಗ), ಯರ (ಜ). [8] ದವರ (ಜ). [9] ಯಂ (ಕ). [10] (ಖ) ದಲ್ಲಿಲ್ಲ. [11] (ಚ) ದಲ್ಲಿಲ್ಲ. [12] ವನೆ (ಗ); (ಚ) ದಲ್ಲಿಲ್ಲ. [13] ತಂಪಿನೊಳು (ಕ). [14] (ಖಗಚ) ಗಳಲ್ಲಿಲ್ಲ. [15] ಹಾಸಿಗೆ (ಗ), ಸೆಜ್ಜೆ (ಚ). [16] ನಾಚಿಯರ (ಖಗಚ). [17] ವ (ಚ). [18] ಯನಾಸೆಗೈಉತ್ತ (ಖ), ಯನಾಸೆಗೆಯಿವುತ್ತಿ<ತ> (ಗಚ), ಯೊಳಾಶೆ - - - (ಜ). [19] (ಕಜ) ಗಳಲ್ಲಿಲ್ಲ. [20] ಸಿಂದ (ಕಜ). [21] ಕೇಳೆಲೆ (ಚ).

ಸೌಕುಮಾರ್ಯಕ್ಕೆ ಹೂದೊಡಿಗೆ ಹೊಱಿ ನಿನ್ನ ಮುಖಮಂಡಲಕ್ಕೆ ಶಶಿಮಂಡಲ ಮುಪ್ಪಾರತಿಯ ಪಾತ್ರೆ ನಿನ್ನ ಲೋಚನಕ್ಕೆಳಮಿಂಚು ಹೊಱಗು ನಿನ್ನ ನಳಿತೋಳ್ಗೆಳಲತೆ [1]ಮಾಡಿ ಮಿಕ್ಕವು[1] ನಿನ್ನ ಕೊರ್ವಿದ ಕುಚಂಗಳ್ಗೆ [2]ಪೊಣ[2]ರ್ವಕ್ಕಿ ಗವಸಣಿಗೆ ನಿನ್ನ ನಡುವಿಂಗೆ ನಳಿನತಂತು [3]ನಿ[3]ರೋಧಂ ನಿನ್ನ ಬೆರಲ್ಗ ರಲಂಬಾಗದ ವಸ್ತು ನಿನ್ನ ನಾಭಿವಳಯಕ್ಕೆ ಪೂಗೊಳಂ ಪುಸಿ ನಿನ್ನ ನಿತಂಬಕ್ಕೆ ಪುಳಿನಸ್ಥಳಂ ಪಳಿವು ನಿನ್ನ ಬಟ್ಟದೊಡೆಗೆ ಬಾಳೆ ಬಹಿಷ್ಕಾರಂ ನಿನ್ನ ಕಿಱುದೊಡೆಗೆ ಕಾಮನ [4]ದೊ[4]ಣೆ [5]ತ್ರೊ[5]ಣೆಯಲ್ಲಂ ನಿನ್ನ ಪದ[6]ತಳ[6]ಕ್ಕೆ ಕೆಂದಾವರೆ ಕರ್ಕಶಂ ಇಂತು ನಿನ್ನ ರೂಪು ಯೌವನ[7]ಮಪ್ರತಿಹತಪ್ರಾಯಂ[7] ಸಿಂಗರಂ ಸೊಗಸದು ಕೇಳ್ [8]ನಿನ್ನ[8] ನಂಪಯಣ್ಣಂ ಮಾಳ್ಪ ಶಿವಪೂಜಾರಸಪೂರಿತ ಕುಸುಮ ಕರಂಡಗೆಯಂತಿ[9]ರ್ದ[9] ನಿನಗೆ ನಿಸ್ಸಾರವಸ್ತುಗಳು[10]ಪಮಾನವ[10]ಲ್ಲೆ ನಲು ಕೇಳ್ದು ಸಂಕಿಲಿಯರಿರ್ದ ಪರಿಯೊಳಿರ್ದು [11]ಕೈಗೊಟ್ಟ[11] ರತಿಮಂಗಳೆಯಂ ನೆಮ್ಮಿ ಇಂದುಮುಖಿಯರ್ ಮಾಂದಳಿರ ಹಾವುಗೆಯನಿಡಲ್ಕೆ ಮೆಟ್ಟಿ ಮಯ್ಗೆ ಮಯ್ಯಂತಪ್ಪ ಸಪುರ[12]ವನು[12]ಟ್ಟು ಮೆಲ್ಲಡಿಯಿಡುವ ಮೃದುಗತಿಗೆ ಮರಾಳಂ ಗಳ್ ಮನವಿಕ್ಕೆ ಆಲಿಪರಲ ಪುತ್ತಳಿ ಶಶಿಕಾಂತದ ಪ್ರ[13][ತಿ]ಮೆಗಳಿನೋಲೈ[13]ಸಿ ಕೊಳುತುಂ ಸುರತಾಬ್ಧಿಯೊಳ್ ಕರಗಲ್ ಬರ್ಪಂತೆ ಮೆಲ್ಲಮೆಲ್ಲನೆ [14]ಬಂ[14]ದು ಮದನಕೇಳೀಸದನಮಂ ಪೊಗುತಪ್ಪಾಗಳ್

ಸೆಜ್ಜೆಯ ಮನೆಯೊಳಗೆ ವಸಂತನೊಡನೇಕಾಂತ[15]ದೊಳಿರ್ಪಭಿನವ[15] ಮಕರ ಧ್ವಜನಂತೆ ತುಂಬುರ[16]ನೊಳ್[16] ನುಡಿವುತಿರ್ದ ನಂಬಿಯಣ್ಣಂ ಸಂಕಿಲಿಯಂ

---

[1] ಹಿಡಿ ಮಿಕ್ಕವು (ಕ), ಮಾಮಿಕವೂ (ಗ); ಪಾಟಿಯಲ್ಲಂ (ಚ). [2] ಕೊಳ (ಖ), ತೊಱ (ಗ). [3] ವಿ (ಖಗಚ). [4] ಡೊ (ಗಚ). [5] ಯೆ (ಖ), ಕೊ (ಗ), ಡೊ (ಚ). [6] ಕಮಳ<ಲ> (ಗಚ). [7] ಗುಣಚಾರಿತ್ರಕ್ಕೆ ಪ್ರತಿಯಲ್ಲಯಿಾ ಪ್ರಾಯಕ್ಕಂ ರೂಪಿಗಂ (ಚ). [8] ನಿಂ (ಕಖಜ), ನಿಂನ (ಗಚ). [9] ರ್ದಪೆ (ಗ), ರ್ದು (ಚ). [10] ಸಮಾನವ (ಕ), ಪಮೆಯು (ಖ), ಉಪಮಾನವ (ಚ). [11] ಕೈಗೊಟ್ಟು (ಕಜ), ಕೈಕೊಟ್ಟ (ಚ); (ಖ) ದಲ್ಲಿಲ್ಲ. [12] ದೇವಾಂಗವುಂನು (ಚ). [13] ತುಮೆಗಳನೋಲೈ (ಕ), ತುಮೆಯನೋಲೈ (ಖ), ತುಮೆಗಳನೊಂದಿ (ಗ), ಫಮೆಯೋಲಗಿ (ಚ), ತುಮೆಗಳಿಂದೋಲೈ (ಜ). [14] ನಡೆತಂ (ಖಗಚ). [15] ವಿಪ್ಪ ನವೀನ (ಖಗಚ). [16] ನೊಡನೆ (ಖಚ).

ಘೋಂಕಸೆ ಕಂಡು ಧೈರ್ಯಂ ಧರಣಿಗೆ ಬಿರ್ದು ಕಾರ್ಪಣ್ಯಂ ಪುಟಸೆಗೆದು ಉರಪಣಿಪ [1]ಮಸದ ಲಲ್ಲೆ[1] ಕಣ್ಗಳ ಕೊನೆಯೊಳ್ [2]ಕರು[2]ವಿಟ್ಟು ಕೊಸರುತ್ತಿರೆ ಕುಳ್ಳಿರ್ದ ಸೌಂದರನ ವಾಮಭಾಗದ ತೆಳ್ಪಶೇಪ[3]ದೊಳ್ ತವರಾಜದ ಸಸಿಯ ಮೇಲೆ ಸವಿಯ ಬಳ್ಳಿ[4]ಯುಸಡರಿ[4]ಸುವಂತೆ [5] [6]ಒತ್ತುಮಱುೆ ಸಹಿತಂ[6] ಸಂಕಿಲಿಯುಂ[7]+ [8]ಹತ್ತಿರೆ[8] ಕುಳ್ಳಿರಿಸಿ[5] ಹಂಸೆಗೆ ಪಾಲುಗ್ಗಡಿಸೆಂಬ [9]ಕೀರಂ[9]ಗೆ ಕುಟುಕನಿಕ್ಕೆಂಬ ಚಕೋರಿಗಳಂ ಚಂದ್ರಕಾಂತದ ನೆಳಲ್ಗೆ ತೆಗೆಯೆಂಬ ಚಕ್ರಮಿಥುನಂಗಳಂ ಪೂಗೊಳಕ್ಕೆ ಕಳುಪೆಂಬ ಮರುಗದ ಮಡಿ[10]ಯೊಳ್[10] ಕಸ್ತುರಿಯುಂ ಚೆಲ್ಲೆಂಬ ಕುರವಕವಸಪ್ಪಿ ಅಂಕುರಿಸೆಂಬ ಅಶೋಕೆಯನೊದೆದು ಪಲ್ಲವಿಸೆಂಬ [11]ಹಾದ[11]ರಿಯ ನೆಳಲ್ಗೆ [12]ಹರಿಣಂಗಳಂ ಹೊಡೆ[12]ಯೆಂಬ ಕೆಲಸದ ಸೆವದಿಂ ರತಿಮಂಗಳೆ ಬಂದ ಕೆಳದಿಯ[13]ರೆಲ್ಲರಂ[13] ಮೆಲ್ಲಮೆಲ್ಲನೆ ಕಳುಪಿ ತಾಂ ದೇವಿಯರ ಸಿರಿಮುಡಿಗೆ ಪೂಗೊ[14]ಯ್ಯಲೆಂ[14]ದು ಸಂಕಿಲಿ[15]+ಗೆ ಪೇಳ್ದು ಮೆಲ್ಲನೆ ಸರಿಯೆ ತುಂಬುರಂ [16]ದೇಪರ[16] ಪಡಿಪೊಸ್ಗಳಂ ಬೀಳ್ಕೆ ಸೆವದಿಂ ಬೀಳ್ಕೊಂಡು ಪೋಗಲ್-

ಇತ್ತಲು [17]ಸೌಂದ[ರಂ] ಮನ್ಮಥವೈಹಾಳಿಗೆ[17] ತಸುವಿಂಬಾ[18]ಗಿ[18] ಜೆಳ್ದಿಂಗಳ ಹಂಗಿಸ ಚಂದ್ರಕಾಂತಮುಂ ನಗುವಂತಿರ್ದ ಸ್ವಭಾವ[19]ರ[19]ಸಾಂಗಿಯ ಲಜ್ಜೆಯ ಲಂಚ[20]ಗು[20]ಳಿಯ [21]+ನೋಟದ ತವಕ[22]ಕಾರ್ತಿ[22]ಯ ಯೌವಸಂ

---

[1] ಮದನಲಲ್ಲೆ (ಖ), ವ<ಮ>ನದಲ್ಲಿ (ಗಚ). [2] ಮನ (ಚ). [3] ಪ್ರದೇಶ (ಕ). [4] ಯಂ ನಡಯಿ (ಚ). [5] ಈ ಭಾಗ (ಗ) ದಲ್ಲಿಲ್ಲ. [6] ಪೊವೃತ್ತಮಿರ್ದ್ಧ ಸಖಿಯರು (ಕ), ಪೊತ್ತುಮಱುೆ ಸಹಿತ (ಖ), ಪೊತ್ತುಳ (?) ವಿಸಕಂ (ಚ), ಪೊತ್ತುಮಱು ಸಹಿಕಂ (ಜ). [7] + ನಂಬಿಯಣ್ಣನ (ಚ). [8] (ಜ) ದಲ್ಲಿಲ್ಲ. [9] ಸುಕಂ (ಚ). [10] ಗೆ (ಖ). [11] ಪಾದಿ (ಚ). [12] ಹಂಸೆಗಳಂ ತೆಗೆ (ಕ), ಪರಿಣನಂ ಹೊಡೆ (ಖ). [13] ರನೆಲ್ಲಂ (ಖ). [14] ಯ್ವೆನೆಂ (ಗ). [15] + ನಾಚಿಯರಿ (ಚ). [16] (ಖ) ದಲ್ಲಿಲ್ಲ; ದೇವರಲ್ಲಿಗೆ (ಗ), ದೇವರಲ್ಲಿ (ಚ). [17] ಸೌಂದರ ಮನುಮಥ - - - (ಕ), ಸೌಂದರ ಮನ್ಮಥ ವೈಯ್ಯಾಳಿಗೆ (ಖ), ಸೌಂದರ ಮನುಮತ ವಯ್ಯಾಳಿಗೆ (ಗ), ಸೌಂದರನ ಮನುಮಥ - - - (ಚ), ಸೌಂದರನ ಮನಂ ಮನ್ಮಥ - - - (ಜ). [18] ಗೆ (ಖಚ). [19] ಸರ (ಜ). [20] ಗೂ (ಖಗಚಜ). [21] + ಸವಿ (ಖ). [22] ಕಾರ್ತ್ಥಿ (ಕ), ಕಾಂತಿ (ಖಗ), ದ ಕಾಂತಿ (ಚ).

[1]+ ತೀವಿದ ಸುಖ[2]ಮೌನಿಯ[2] ಅಪರಿಮಿತಮುಗ್ಧೆಯ ಮಿಾಸ[3]ಲ ಮನಮಂ[3] [4]ತನ್ನತ್ತ [5]ಸೆಳೆ[5]ದು ಮೇಲ್ವರಿದ ಸುಖಕ್ಕೆ ಮನಮನಿತ್ತು [6]ಬರೆ ತೆಗೆದು[6] ಸಕಲಾವಯವಂಗಳ್ [7]ತಮ್ಮೊಳ್[7] ತಮ್ಮನಾಲಿಂಗಿಸೆ ಸೋಂಕು ಸೋಂಕಿನೊಳ್ ಮಯ್ ಮಯ್ಯೊಳ್[4] ಮನಂ ಮನದೊ[8]ಳದ್ದು[8] ಸೊಬ[9]ಗು[9] ಸುಮ್ಮಾನ[10]ಮಾಗೆ ನಿಡುಸುಯ್ ಮಲಂಗಿ[10] ಸರ್ವಾಂಗಂ ಸಡಿಲ್ದನುಭವ[11]ದ[11] ಜೊಮ್ಮು ಜಕ್ಕುಲಿಸೆ ಸುಖಮುಖದೊಳ್ ಮೂರ್ಛಿತರಾಗಿ ಸೆನ[12]ಪಿ[12]ನನುಭವವಳಿ[13]ದ[13] ಮಾನಸಪೂಜೆ ಮನಸಿಜಹರನಲ್ಲಿಗೆಯ್ದುತಿರೆ ಸುಖ[14]ಸುಪ್ತಿ[14]ಯೊಳ್ ಕಿಱಿದು ಬೇಗಮಿರ್ದು ಎಂತಕ್ಕೆ ಎಚ್ಚತ್ತು ಬಳಸಿದ ಸುಖ[15]ದ ತ[15]ಣಿವಂಕುರಿಸಿ[16]ದನು[16]ರಾಗದೊಳಱತು [17]ತ್ವರಿತಂ[17] ತುದಿಗೇಱಿ ಮತ್ತೆ ಮತ್ತೆ [18]ಮನಂ[18] ಸುಖ[19]ದಱಲು[19] ಪತ್ತಿ ಅಪ್ಪು ಸಡಿ[20]ಲ್ದ[20] ಕಡುವಿರಹದಿಂ ಸುಡಿಯಲಱಿಯದ ಮುಗ್ಧೆಯ ಕಪೋಲದ [21]ಕೋ[21]ಪಂ ಕಣ್ಗಳ [22]ಖಾ[22]ತಿ [23]ಮೊಗದ[23] ಮುನಿ[24]ಸು[24] ಸುಯ್ಯ ಕ[25]ಠಿ[ನ]ಂ[25] [26]+ ಪುಟ್ಟುವನುರಾಗಕ್ಕೆ ಪಡಿಬಲಮಾಗೆ ಸಂಕಿಲಿಯಪ್ಪು [27]ಸೌಂದರನಪ್ಪು ಸಂಕಲೆಯಾದಪುದೆಂಬಂತೆ[27] ಮನವನಪ್ಪಿದವರ್ಗೆ ತನುವಿಸಾ

---

1 + ಮನಂ (ಕಜ). 2 ಮೋಹನೆಯ (ಖ), ಮೋಹಿನಿಯ (ಗ), ಮೋಹನದ (ಚ). 3 ಲಂ (ಖ), ಲ (ಗ). 4 ಈ ಭಾಗ (ಗ) ದಲ್ಲಿಲ್ಲ. 5 ತೆಗ (ಖ). 6 (ಖ) ದಲ್ಲಿಲ್ಲ. 7 (ಕಚ) ಗಳಲ್ಲಿಲ್ಲ. 8 ಳು (ಖ). 9 ಗುಂ (ಖಗಚ). 10 ದೊಳು ನುಡಿಯಿಸುವಂಗೀ (ಖ). 11 ದಿಂ (ಕ), ನ (ಖ). 12 ಹಿ (ಖಚ), ಸಿ (ಗ). 13 ದು (ಖಗಚ), ಯದ (ಚ). 14 ಸುಷುಪ್ತಿ (ಖ), ದ ಸೂಕ್ತಿ<ಪ್ತಿ> (ಗಚ). 15 ಮ (ಖ), ದ (ಗ), ದಕು (ಚ). 16 ಅನು (ಖಜ), ದ (ಚ). 17 ತುರಿತಂ (ಗಚ), ಆತುರಂ (ಜ). 18 (ಖ) ದಲ್ಲಿಲ್ಲ. 19 ದರಲು (ಕ), ದರಿವು (ಗ), ದ ಅಱಲು (ಚ). 20 ಲ್ದು (ಗಚ). 21 ತಾ (ಚ). 22 ಕಾಂ (ಖಗಚ). 23 ಮುಗುದ (ಖ), ಮೋನದ (ಚ) ; ತೀವೆ ಮನದ (ಗ). 24 ಸಂ (ಖಗ), ಸುಂ (ಜ). 25 ಠಿಣಂ (ಕಗಚಜ), ರಿಣಮಂ (ಖ). 26 + ಪುಟ್ಟುವನುರಾಳುತ್ತುಂ (ಗ) ; ಇದಾದಮೇಲೆ, 'ಸುರತಾಬ್ಧಿಯೊಳು ಕರಗಲು ಬಪ್ಪಂತೆ - - - ನುಡಿಯುತಿರ್ದ ನಂಬಿಯಣ್ಣಂ' ಎಂಬ ೨೭-೩೦ನೆಯ ಪಂಕ್ತಿಗಳಲ್ಲಿನ ಭಾಗ (ಗ) ದಲ್ಲಿ ಪುನರುಕ್ತವಾಗಿದೆ. 27 - - - ಸಂಕಿಲೆ<ಲಿ>ಯಾದಪು<ಪ್ಪು>ದೆಂಬಂತೆ (ಖಗ), ಸೌಂದರನಪ್ಪು ವೊಂದಾಗೆ (ಚ), ಸೌಂದರನಪ್ಪಾದಪುದು ಸೌಂದರನಪ್ಪು ಸಂಕಿಲೆಯಪ್ಪಾದಪುದೆಂಬಂತೆ (ಜ).

ಲಿಂಗಸ[1]ವ[1]ಗಲ್ಕೆಯೆಂಬಂತೆ ಎಡೆಗುಡದ ಸ್ನೇಹಕ್ಕೆ ಸುಡಿ ವಿರಹವಾಗೆ ಅತ್ಯನುಭವಸುಖದಿಂ ಪತ್ತಿ ಪತ್ತಿ [2]ಮೂರ್ಛೆ[2]ಸೆ ಕ[3]ರು[3]ಣದಿಂ ಶಿವನೆಚ್ಚಱಿಸಿ ಅರ್ಚನೆಗೊಳುತ್ತಿರಲ್ ಇಂತಿರು[4]ಳ್ಪ[4]ಗಲನಱಿಯದೆ [5]+ ಹಿಂದುಮುಂದಱಿಯದೆ [6]ಕೆಲಬಲನಱಿಯದೆ[6] ಮನ[7]ವ[7]ಱಿಯದೆ [8]ಮೆಯ್ಯಱಿಯದೆ ಬುದ್ಧಿಯಱಿಯದೆ[8] [9]ದ್ವೈತಾದ್ವೈತ[9]ಸುಖಿಗಳಾಗಿ [10]ಸಂಕಿಲಿಯಲ್ಲದುಳಿ[11]ದುದೆಲ್ಲಂ ಗಂಡು[11] ನಂಬಿಯಣ್ಣ[12]ನಲ್ಲದು[12]ಳಿ[13]ದುದೆಲ್ಲಂ ಹೆಣ್ಣಾಗಿ ತೋಱೆ ಮಾಸಂಗಳ್[13] ನಿಮಿಷಂಗಳಾಗೆ ಪರಿಜನಮಂ ಪರಿಕಿಸದೆ[10] ತುಂಬುರನನಱಿಯದೆ ಮದನಹ[14]ರನಂ[14] ಮಱೆದು ಮೂಱು ವರುಷ[15]ವಾತುರದೊಳೀ[15] ತೆಱ[16]ದಿಂದಿ[16]ರೆ

ಕಟ್ಟಕ್ಕಱ ಮಗಂ [17]+ ಕೆಟ್ಟುಪೋದಪನೆಂದು ಕೊಟ್ಟ ನಂಬುಗೆಯಂ ನೆನೆದು ಕಾಮಾರಿ ಕರುಣದಿಂ ಮಾರುತನಂ ನೆ[18]ನೆಯೆ[18] ನಡುಗುತುಂ ಬಂದು ಮಯ್ಯಿಕ್ಕಿ ನಿಂದು ಮುಂದಿರ್ದ ಗಂಧ[19]ವಹನಂ ಕಂಡಭಯಮನಿತ್ತು[19] ನೀಂ ತಿರುವಾರೂರ್ಗೆ [20]ಬೇಗದಿಂ[20] ಪೋಗಿ [21]ಕೇಳೀವನದಾ[21]ಮೋದಮಂ ಸರೋಜಾ[22]ಕರದ[22] ಸೌರಭ್ಯಮಂ ಪರವೆಯರ [23]ನ[23]ಱುಸುಯ್ಯ ಸವಿಗಂಪುಮಂ ಎ[24]ಮ್ಮ[24] ಪ್ರಸಾದದ ಪರಿಮಳಮುಮಂ ಕೊಂಡುಬಂದು ಸಂಕಿಲಿಯೊಳಿಪ್ಪ ಸೌಂದರನ

---

1 ದ (ಕ), ವನ (ಖ). 2 ಹೆಚ್ಚಿ (ಕ). 3 ರ (ಕ). 4 ಳ್ವ (ಖಗ), ಳುಂಪ (ಚ). 5 + ದೆಸೆಯಱಿಯದೆ (ಖಗಚ). 6 (ಖ) ದಲ್ಲಿಲ್ಲ. 7 ವನ (ಕಜ). 8 (ಚ) ದಲ್ಲಿಲ್ಲ. 9 ಅದ್ವೈತಾದ್ವೈತ (ಕ), ದ್ವಯಾದ್ವಯ (ಖಚ), ದ್ವಯಾದ್ವಯಾ (ಗ). 10 ಈ ಭಾಗ (ಗ) ದಲ್ಲಿಲ್ಲ. 11 ದ ಸ್ತ್ರಿಯ್ಯರೆಲ್ಲಂ ನಂಬಿಯಣ್ಣನ ನೋಟಕ್ಕೆ ಗಂಡಾಗಿ ಕೋಱೂದು (ಖ). 12 ನು (ಚ). 13 ದಡೆಲ್ಲಂ ಸಂಕಿಲೆಯ ಕಣ್ಣಿಗೆ ಹೆಣ್ಣಾಗಿ ತೋಱೂದು ಸಂಗದೋಳ್ (ಖ), - - - ತೋಱೆ ಈಪರಿ ಸುಖದೊಳಿರೆ ಮಾಸಂಗಳು (ಚ). 14 ರಂ ಕಳುಪಿದ ಕಾರ್ಯಕಾರಣಮಂ (ಚ). 15 ವೀ (ಚ). 16 ದೊಳಿ (ಖಜ). 17 + ನಂಬಿಯಣ್ಣಂ (ಚ). 18 ನದು ಭಯಭಕ್ತಿಯಿಂ (ಚ). 19 ವಾಹನಂ ಕಂಡಭಿನಯ ವಿತ್ತು (ಖ), ವಾಹನನಂ ಕಂಡಭಿನಯವಿತ್ತು (ಗ), ವಹನಂ ಕಂಡು ಅಭಯವಿತ್ತು (ಚ). 20 (ಖ) ದಲ್ಲಿಲ್ಲ; ಬೇಗಂ (ಗಚ). 21 ಕೇಳೀ<ಕೇ>ವನದ ಕದಂಬಾ (ಖಗ), ಕಳೆ ಆ ಮಹಾವನದ ಕದಂಬಾ (ಚ). 22 ಕರ (ಕ), ತದ (ಖ), ಸಾರ (ಗ), ದಿಯಾದ ಸಮಸ್ತ ಕುಸುಮ (ಚ). 23 ಬಿ (ಚ). 24 ನ್ನ (ಖ).

ಸರ್ವೇಂದ್ರಿಯಂಗಳೊಳ್ ಸಲಿಸಿ ಕೊಂಡೊಯ್ವು[1]ದೆಂ[1]ದೆನೆ ಹಸಾದವೆಂದು ಜೀಳ್ಕೊಂಡು ಬಂದು [2]+ ಬೆ[3]ಸ[3]ಸಿದಂತೆ [4]ತಿರುವಾರೂರ[4] ಪರವೆ[5]ನಾಚಿ[5]ಯರ ಮಯ್ಯ ಸುಗಂಧಂ ಮೊದಲಾದ [6]+ ಸಕಲಪರಿಮಳಮಂ ಕವ[7]ರ್ತೆಗೊಂಡಾ[7] ಮೋದಭಾರದಿಂ [8]+ ಮಂದಾನಿಲನಾಗಿ ಮೆಲ್ಲಮೆಲ್ಲನೆ ಬಂದು ವಸಂತ ಸಮಯದೊಳ್ ತಿರುವತ್ತಿಯೂರಂ ಪೊಕ್ಕು ಕಾಮನ ದಾಳಿ ಕವಿ[9]ವಂ[9]ತೆ ಪರವೆಯರ ಪುಯ್ಯಲುರವಣಿಸು[10]ವಂ[10]ತೆ ಶಿವನಾಜ್ಞೆ ಸಂದಣಿಸುವಂತೆ ಬಂದು
ಪುರಜನಮೆಲ್ಲಮಂ ಸೋಂಕಿ[11]ದ[11] ತರುಕುಲಪರ್ವತಂಗಳೆಲ್ಲಮಂ ತಿರುವಾ ೮೦
ರೂರತ್ತಲಭಿಮುಖಮಂ ಮಾಡುತುಂ [12]ಜೀಸಿ ಘಾಸಿ[12]ಮಾಡೆ

ವಸದೊಳಗಣ ಸೆಜ್ಜೆಯ ಮನೆಯೊಳು ಸುರತಶ್ರಾಂತಿಯಿಂ ಬಳಲ್ದು ಸಂಕಿಲಿ [13]ಮಱದೊ[13]ಱಗಿರೆ [14]+ ಬೆಮರ್ತೊಯ್ಯನೆಚ್ಚ[15]ತ್ತಿರ್ದ[15] ನಂಬಿಯಣ್ಣನ ತನುವಂ ಮುತ್ತಿ ನಾಸಿಕಮಂ ಪತ್ತಿ ಮನಮಂ ಸುತ್ತಿ ಸಂಕಿಲಿಯ ನೇಹಮಂ [16]ಹಾ[16]ಱಸಿ ಪರವೆಯರ ನೇಹದ [17]ವಶೀಕರಣ[17]ಪರಿಮಳಮಂ ತೋಱ[18]ಸೆ[18] ಸೌಂದರನೆರ್ದೆ ಧಿಗಿಲೆಂದು [19]+ ಮನದ ಬೆಸುಗೆ ಬಿಟ್ಟು ಚಿತ್ತವೆ[20]ತ್ತಿಕ್ಕಿ[20] ಭೋಂಕನೆದ್ದು ಮರುಳಂತೆ ಮುನಿದಂತೆ ಕಾ[21]ಮತಾಪದಿಂ ಕಣ್ಗಾ[21]ಣದೆ ಉರವಣಿಸಿ ನಡೆತಂದು ತುಂಬುರ[22]ನಿಂ[22] ಪರಿಜನಮಂ ಚತುರಂಗಬಲಮಂ ಕ[23]ರಯಿ[23]ಸಿ ಶಿವಸಾಮರ್ಥ್ಯಮಂ ನೋಡ[24]ದೆ[24] ಸೂರುಳಂ ಸು[25]ಯಿದಾನಂ[25]

---

1 (ಖಗಚ) ಗಳಲ್ಲಿಲ್ಲ. 2+ ಶಿವಂ (ಖಚ). 3 ರ (ಜ). 4 (ಗ) ದಲ್ಲಿಲ್ಲ. 5 (ಖಗ) ಗಳಲ್ಲಿಲ್ಲ. 6+ ವನದ (ಚ). 7 ರ್ತುಕೊಂಡಾ (ಖ), ರ್ತಿಗೊಂಡಾ (ಗಜ); ರ್ತೆಗೊಂಡು ಶಿವಪ್ರಸಾದಾ (ಚ). 8+ ಸಮಸ್ತ ಸೌರಭ್ಯಮಂ ಮೇಳವಾಗಿ (ಚ). 9 ದಂ (ಕಜ). 10 (ಕ) ದಲ್ಲಿಲ್ಲ. 11 (ಕಖ) ಗಳಲ್ಲಿಲ್ಲ. 12 ಬಿಸಿ ಘಾಳಿ (ಖ). 13 ಯ ಮರದೊ (ಕ), ಯವರು ನಂಬಿಯಣ್ಣನುಂ ಮಱದೊ (ಚ), ನಾಚಿಯರೊ (ಜ). 14+ ನಸು (ಖಗಚ). 15 ತ್ತ (ಖ). 16 ಪಾ (ಚ). 17 ವೈಸಿಕರಣಮಂ (ಖ). 18 ರಿಸೆ (ಕ), ಸಿ (ಖಜ); (ಗಚ) ಗಳಲ್ಲಿಲ್ಲ. 19+ ತನು ಭುಗಿಲೆಂದು (ಖ). 20 ತ್ತಿಕೆ (ಖ), ತಿಕ್ಕೆ (ಗ). 21 ಮಾತುರದಿಂ ಮುಂದುಗಾ (ಕ). 22 ಮಂತ್ರಿಯಿಂ (ಚ). 23 ರಿ (ಖ), ರ (ಗಚ), ರ ಇ (ಜ). 24 ಲು (ಕ). 25 ಯ್ಧಾನಂ (ಕ), ಯ್ಯಿದಾನಮಂ (ಗ), ಇಧಾನಂ (ಜ).

ಮಾಡದೆ [1]+ ಮತ್ತಗಜಮನೇಱಿ [2]ಒ[2]ತ್ರರದಿಂ ನಡೆತಪ್ಪಾಗಳು ಹಿಂದೆ ಸಂಕಿಲಿ[3]+ [4]ತಂಬೆಲರಿಂದೆ[4]ಚ್ಛತ್ತು ಸಿರಿಮಂಚದೊಳ್ ಸೌಂದರಸಂ ಕಾಣದೆ [5]ಕೈಲಾಸಕ್ಕಱಸಲ್ ಪೋದಪಳೆಂಬ[5] ವಾರ್ತೆ ಪರವೆಯ[6]ರ ರಸ[6]ಸುಡಿ ತೀಪಿರ್ದ ನಂಬಿಯಣ್ಣನ [7]ಕರ್ಣಮಂ ಪೊಗ[7]ಲಾಱದಿರೆ [8]+ ನಡೆ[9]ದು[9] ತಿರುವತ್ತಿಯೂರಂ ಪೊಱಮಟ್ಟು ಶಿವನಾಜ್ಞೆ[10]ಯು[10] ಸೀಮೆಯಂ ಮಿಾಱಿ

ಸಂಕಿಲಿಯಂ ನೋಡಿದ ಕಣ್ಗ[11]ಳು[11] ಪರವೆಯರಂ ನೋಡಲಾಗದೆಂಬಂತೆ ಶಿವ[12]ನನಂ[12]ತರ್ಮುಖ[13]ದಿಂ[13] ನೋಡಲೊಳಪೊಕ್ಕವೆಂಬಂತೆ [14]+ [15]ಕಣ್ಣ[15] ಮಾಯ[16]ವಾಗೆ[16] ಕೌತುಕಂಬಟ್ಟಾಸೆಯಿಂದಿಳಿದು ತಿರುಗಿ ತುಂಬುರ[17]ನ ಕೈವಿಡಿದು[17] ತಿರುವತ್ತಿಯೂರ ಹರನಲ್ಲಿ[18]ಗೆಯ್ತ್ತರೆ[18] ತನ್ನ ಬರಪಿಂಗೆ [19]ಕದವನಿಕ್ಕಿ[19]ದ ಶಿವನಿಳಯಮಂ ಕಂಡು ಶಿವನೆ ಕಣ್ಣೆ ಗತಿಯೆ ಮತಿಯೆ,

---

[1]+ ಶಿವಂ ಮಾಡಿದ ಮಾಯಾಭ್ರಾಂತಿಯಿಂ (ಚ). [2] ವು (ಗ). [3] + ನಾ ಚಿಯರು (ಚ). [4] ತಣ್ಣೆಲರಿಂದೆ (ಖ), ತೆಂಬರಳಿನಿದ್ದೆ (ಗ). [5] ಕೈಲಾಸಕ್ಕರಸಲ್<ಱಿಸ> - - - (ಕಖ), ಕೈಲಾಸಕರಿಸ - - - (ಗ), ಕೈಲಾಸಲ್ಪೋದಪಳೆಂಬ (ಜ) ; ಮನಂ ನೊಂದು ಚಿತ್ತವಱಿತು ಅಹಂಕಾರವಡಂಗಿ ಬುದ್ಧಿಯಿಂ ವಿಚಾರಿಸಿ ಶಿವಶಿವಾ ಮಹಾದೇವಾ ಯಿಂತು ಮಾಡಿದಾ ಯೆಂದು ನಂಬಿಯಣ್ಣನಿಲ್ಲದೆ ನಾನಿರಲಾರ್ಪೆನೆ ನಂಬಿಯಣ್ಣ ಶಿವನೊಳಗಿಪ್ಪ ನಾನಲ್ಲಿಯೆ ನೋಡಿಕೊಂಬೆನೆಂದು ನಿಶ್ಚಯಿಶಿ ನಮಃ ಶಿವಾಯ ನಮಃ ಶಿವಾಯ ಯೆಂದು ಕೈಲಾಸಕ್ಕೆ ನಂಬಿಯಣ್ಣನಂ ಸಂಕಿಲಿನಾಚಿಯರು ಅಱಿಸಲು ಪೋದಳು ಯೆಂಬಂತೆ ಪ್ರಾಣಂ ಪೋಗೆ ಯಿಾ (ಚ). [6] ರ ಸವಿ (ಖಗಚ), ರಸ (ಜ). [7] ಸುಗಳಿಯ (ಖಗ), ಕಿವಿಗಳ್ಗಿಯಿರ (ಚ). [8] + ಯಿತ್ತಲು ಶಿವದೇವಿಯರು ಬಂದು ಸಂಕಿಲೆಯಂ ಕಂಡು ನಂಬಿಯಣ್ಣಂ ವಿಯೋಗಮಾಗೆ ಸುಖಸ್ವರೂಪಿ ಸುಖಿಭೋಗಿಯಿರಲಾರ್ಪಳೆ ಸುರತಾನುಪರಮಸುಖಸ್ವರೂಪಿಯಪ್ಪ ತಿರುವತ್ತಿಯೂರ ದೇವರ ಸ್ತ್ರೀಪದಮಂ ಕೂಡಿ ಮಹಾಸುಖಪದವನು ಭೋಗಿಸುವಳೆಂದು ಪರಿಣಮಿಸಿ ಚೋದ್ಯಂಬಡುತ್ತಿರೆ ಯಿತ್ತಲು ನಂಬಿಯಣ್ಣಂ ಪರವೆಯರ ಮೋಹದೊಳೇನುಮನಱಿಯದೆ (ಚ). [9] ತರುತೆ (ಜ). [10] (ಖಚ) ಗಳಲ್ಲಿಲ್ಲ ; ಯುಂಬ (ಗ). [11] ಳೊಳು (ಕ). [12] ನ ತನ್ನಂ (ಖ), ನ ಅಂ (ಚ), ನಂ (ಜ). [13] ದೊಳು (ಖಗಚ). [14] + ಶಿವನ ಆಗ್ನೆಯ ಮಿಾಱಿಲು (ಚ). [15] ಕಣ್ಣ ದ್ರಿಷ್ಟಿ (ಖ), ಕಂಣುಂ (ಗ), ಕಂಣ (ಚ). [16] ಮಾಗಿ ಪೋಗೆ (ಚ). [17] ಮಂತ್ರಿಯ ಕಯ್ಯಂ ಪಿಡಿದುಕೊಂಡು (ಚ). [18] ಗೈತಂದು (ಖ). [19] ಕದವಿಕ್ಕಿ (ಖ), ಕವಾಟವನಿಕ್ಕಿಸಿ (ಚ), ಕಥವನಿಕ್ಕಿ (ಜ).

[1]ಮುಕ್ಕಣ್ಣಾ[1] ಮೊಱೆಯೋ [2]ಮೊಱೆಯೋ[2] ಶಿವ[3]ಧಾ ಶಿವಧಾ[3] ಎಂದು ೧೦೦ ಪುಯ್ಯಲಿಡೆ ಆಜ್ಞಾಭಂ[4]ಗದಪರಾಧಿ[4]ಯ [5]+ ನುಡಿಗೇಳದೆ ಶೂಲಿ [6]ಸುಮ್ಮನಿ[6]ರೆ ಮತ್ತೆ ಮತ್ತೊಱಲಿ ದೇಸಿಗಸಂತೆ ಬೇಸತ್ತು ದೇವಾ ಕಣ್ಗೊಡದಿರ್ದೊ[7]ಡೊಂದು[7] ಕೋ[8]ಲ್ಗೊ[8]ಡಲಾಗ[9]ದೆ ಎನ್ನಯ್ಯಾ[9] ಶಿವ ಶಿವ [10]+ ಕರುಣಿ ಮಹಾದೇವಾ ಎಂದು [11]ಮನವೊಡೆಯಲೊಟ್ಟೆ ಒಱಲೆ[11] ಜಲಹರಿಯಿಂದೊಂದೂಱುಗೋಲು ಪೊಱಮಡಲದಂ ಕೊಂಡು ತುಂಬುರ[12]ನ ಕೈವಿಡಿದತಿಕಾಮಿ[12] ಕಣ್ಗಾಣದೆ ಕಾಲ್ನಡೆಯೊಳ್ ಪುರಮಂ ಪೊಱಮಟ್ಟು ತಿರುವಾರೂರತ್ತಲಭಿಮುಖನಾಗಿ ಬರೆವರೆ ||

ಚತುರ್ದಶ ಸ್ಥಲಂ

1 ತ್ರಿಲೋಚನಾ (ಚ). 2 (ಖ) ದಲ್ಲಿಲ್ಲ. 3 ದೋ<ಧೋ> ಶಿವದೋ (ಖಚ), ದಾ ಶಿವದಾ (ಗ); ಧಾ (ಜ). 4 ಗಾಪರಾಧಿ (ಕ), ಗದ ಪರವಾದಿ (ಗ), ಗದ ಅಪರಾಧಿ (ಚ). 5 + ಅವನ (ಚ). 6 ಸೂಲಮಾಗಿ (ಚ). 7 ಡಂ (ಖಗಚ). 8 ಲ್ಗ (ಕ), ಲಂ ಕೊ (ಚ). 9 ದೆ ಯೆಂನಯ್ಯಾ (ಕ), ದೇನಯ್ಯಾ (ಖ), ದೆ ಯೇ<ಯೆ>ನಯ್ಯಾ (ಗಚ), ಯನಯ್ಯ (ಜ). 10 + ಮಹಾದೇವಾ (ಚ). 11 ಮನವೊಡೆಯಲೊರಲ್ಲಿ (ಗ), ತನುಮನದನಿವೊಡೆಯಲು ವೊಱಲು (ಚ). 12 ನ ಕೈವಿಡಿದು ಕಾಮದಿಂ (ಖ), ಮಂತ್ರಿಯ ಕೆಯ್ಯಂ ಪಿಡಿಕೊಂಡು ಅತಿಕಾಮಿ (ಚ).

೧೫ನೆಯ ಸ್ಥಲ

ಕೆಲಬಲದಲ್ಲಿ ಕುಂಜರಘಟಾವಳಿಯಶ್ವಬಲಂ ಪದಾತಿಸಂ-
ಕುಳವೊಲವಿಂ ಬರುತ್ತಮಿರೆ ಮುಂದೆ ಸುವರ್ಣದ ಪೆಟ್ಟಿಕಾಳಿಯ- |
ಗ್ಗ[1]ಳಿ[1]ಸಿ ನಿಮಿರ್ಕೆಯಿಂ ನಡೆಯೆ [2]ಕಾಲ್ನಡೆಯೊಳ್ ನಡೆ[2]ತಂದನೀಶ್ವರಾ-
ಕುಳ[3]ಚಳ[3]ಚಿತ್ತವೃತ್ತಿ ಮನದೊಳ್ ಮೊಳೆಯಲ್ ಮರುಳಾಗಿ ಸೌಂದರಂ ||

ಇಂತು ಶಿವನಾಜ್ಞೆಯಂ ಮಿಾಱಿ ಬರುತುಂ ನಡೆದು
ಮುಂತೆ [4]ಕಾಂಚೀ[4]ಪುರಕೆ [5]ನಡೆ[5]ದನುಮ್ಮಳವಿಡಿದು |
ಬಂದು ನಿಂದೇಕಾಮ್ರನಾಥನಂ [6]ಕಾಣು[6]ತುಂ
ಇಂದುಧರ ಶರ[7]ಣೆನುತೆ[7] ಕರುಣಮಂ ತೋಱುತುಂ |
ಮಯ್ಯಿಕ್ಕಿ ನಡೆನಡೆದು ಕಯ್ಯೆತ್ತಿ ನಿಂದಿರ್ದು
[8]ಅಯ್ಯ ಅಯ್ಯಾ[8] [9]ಎಂದು[9] ಹೆಱಮೆಟ್ಟಿ ಕೆ[10]ಲ[10]ಸಾರ್ದು |
ದೇವ ಜನ್ಮವಿದೂರ ಜಗದೇಕಚಕ್ಷುವೇ
ದೇವ ಕಮಲಜಶಿರೋಧರ ಮಹಾಭಿಕ್ಷುವೇ |
ದೇವ ಗೋವಿಂದನಯನಾರ್ಚಿತಪ[11]ದಾಬ್ಜನೇ[11]
ದೇವ ನಿಜಶರಣಕರುಣಾಮೃತ[12]ರಸಾಬ್ಜನೇ[12] |
ದೇವ ಪಾರ್ವತಿಯರಸ ಗೌರೀಮನೋಹರಾ
ದೇವ ಶರ್ವಾಣಿಯೊಡೆಯನೆ ಭವಾನೀವರಾ |
ಪಾರ್ವ[13]ತೀ[13]ಮುಖಕಮಲವಿಕ[14]ಸನ[14] ದಿವಾಕರಾ

---

1 ಲಿ (ಖಗಚ). 2 ಕಾಲ್ನಡೆಯಿಂ ನಡೆ (ಖ), ಕಾಲ್ನಡೆ (ಜ) ; (ಚ) ದಲ್ಲಿಲ್ಲ. 3 ನೆಲೆ (ಕ), ಬಳ (ಗ), ಚಲ (ಜ). 4 ಕಾಂಚಿಯ (ಕಗಜ), ಕಂಚಿಯ (ಚ). 5 ಬಂ (ಖಗಚ). 6 ಪೊಗಳು (ಗಚ). 7 ಣೆಂದು (ಗಚ). 8 ಆಯಯ್ಯ (ಖ), ಅಯ್ಯೊ ಅಯ್ಯೋ (ಗ), ಅಯ್ಯ ಅಯ್ಯೋ (ಚ). 9 ಯೆನುತ (ಗಚ). 10 ಲನಂ (ಖ), ಲಕಂ (ಜ). 11 ದಾಂಬುಜನೆ (ಗ). 12 ರಸಜ್ಜನೇ (ಖ), ರಸಾರ್ಣವನೆ (ಗ), ಸಾರ್ಣನೇ (ಚ), ರಸಾರ್ದನೇ (ಜ). 13 ತಿಯ (ಕಖಚಜ). 14 ಸಿತ (ಕಖ).

ಪಾರ್ವ[1]ತೀ[1]ನಯನ[2]ಯುಗಕುವಲಯ[2] ಸುಧಾಕರಾ |
ಎನ್ನಾಳ್ದ ಎನ್ನೊಡೆಯ ಎನ್ನ ನಿಧಿ[3]ಯೇ ನೋಡ[3]
[4]ಎನ್ನಯ್ಯ ಎನ್ನರಸ ಎನ್ನ ಸುಧೆ[5]ಯೇ ನೋಡ[5] |[4]
ಶರಣಾಗು ಶರಣಾಗನಾಥರ್ಗೆ ನಾಥನೇ
ಕರುಣಿಪುದು ಕರುಣಿ[6]ಪ್ಪುದೇ[6]ಕಾಮ್ರನಾಥನೇ |
ಕಣ್ಣುಳ್ಳವಂ ಕುರುಡನಂ ನೋಡಲಾಗದೇ
[7]ಕಣ್ಣಯ್ದು ಮೂವಡಿಸಿದನೆ[7] [8]ನುಡಿಯ[8]ಲಾಗದೇ |
ಚೋಳಂಗೆ ಹೊನ್ನ ಮಳೆಯುಂ [9]ನಲಿ[9]ದು ಕಱೆದವನೆ
ಕಾಳಿದಾಸಂಗೆ ಮೂಗು[10]ಳ[10] ಕಣ್ಣನಿತ್ತವನೆ |
ಕುರುಡನೆಂದೆನಿಸಿಕೊಳಲಾಱೆನಾಱೆಂ [11]ಶಿವ[11]ನೆ
ಕರುಣಾಕರಾ [12]ನಿರೋಧವನುಡುಗಿಸೆಲೆ ಶಿವನೆ[12] |
ಎಂದು ಸೌಂದರನಲ್ಲಿ ಶಿವದಿಡುತ್ತಿರೆ ಕರಂ
ಒಂದುವಂ ಕರುಣಿಸದೆ ಸುಮ್ಮನಿ[13]ರೆ ಶಂಕ[13]ರಂ |
ತಾಯೇ ಜಗನ್ಮಾತೆ ಕಾರುಣ್ಯವಾರಿಧಿಯೆ
ಬಾಯಳಿವನಂ ನೋ[14]ಳ್ಪುದೆನ್ನಂ ಕೃಪಾನಿಧಿ[14]ಯೆ |
ಕರುಣಿಸುವುದೌ ಎನಗೆ ನೀನಾದೊಡಂ ತಾಯೆ
ಕರುಣಿ ಕಣ್ಗೆ[15]ಟ್ಟಿರ್ದಪೆಂ ನೋಡೆಲೇ[15] ತಾಯೆ |
ಎನೆ ದೇವಿ[16]ಯರು ದೇವ[16] ಸುಮ್ಮನಿರಲೇಕಿಂ[17]ತ್ರೆ[17]

---

1 ತಿಯ (ಕಗಚಜ). 2 ಕುವಲಯಯುಗ (ಜ). 3 ಯೆಂನೊಡೆಯ (ಕ). 4 ಈ ಪಂಕ್ತಿ (ಚ) ದಲ್ಲಿಲ್ಲ. 5 ಯೆಂನೆಱೆಯ (ಕ). 6 ಪುದುಯೇ (ಕಚ), ಸುವುದೇ (ಗ). 7 ಕಂಣೈದು - - (ಕ), ಕಣ್ಣು ಪೋದಲು ಕರುಣದಿಂ (ಖ), ಕಣ್ಣೈ<ಣ್ಬೆಂ>ದು ಮೂವಡಿಸಿದಂ (ಗಚ) 8 ನುಡಿಸಯ (ಕ), ನುಡಿಸ (ಖ), ನೋಡ (ಚ). 9 ನೊಲಿ (ಗ), ತಂ (ಚ). 10 ಳ್ಳ (ಗ). 11 ಹರ (ಖಗಚ). 12 - - - ನುಡಿಗೆಲೆ ಶಿವನೆ (ಕ), ಯಿಾ ವೊಡಲನುಡಿಗಿಸೆಲೆ ಹರನೆ (ಖ), - - - ನುಡುಗಿಸಯಿ ಶಿವನೆ (ಗಚ). 13 ರಲೀಶ್ವ (ಖಗಚ). 14 ಳ್ಪರೆ ನಿಂ - - - (ಕ), ಳ್ಪುದೆಲೆ<ಳ್ಪಡೆ> ಕೃಪಾಜಲನಿಧಿ (ಖಚ), ಳ್ಪುದೆಲೆ ಕೃಪಾಜಲದಿ (ಗ). 15 ಟ್ಟವನ ನೋಡು ನೋಡೆಲೆ (ಗ), ಟ್ಟಿರ್ದಪೆಂನ ನೋಡೆಲೆ (ಜ). 16 ನಾನೊರಲೆ (ಗ). 17 ತು (ಖಗಚ).

[1]ತನಯನೊಱಲುತ್ತಿರಲ್ ಕಣ್ಗೊಟ್ಟಡೇನಿಂತೆ |[1]
ನೀನಱಿ[2]ಯೆ ಅತಿ[2]ಚಪ[3]ಳ[3]ನಾಜ್ಞೆಯಂ ಮಿಾ[4]ಱ[4]ವನೆ
[5]ತಾನಿವಂ ಎನ್ನಾಜ್ಞೆಯಂ ಮಿಾಱೆ ಸೈರಿಪೆನೆ |[5]
ಎನ್ನಾ[6]ಜ್ಞೆ[6]ಯಂ ಕುಮಾರಂ ಮಿಾಱೆ ಸೈರಿಪೆನೆ
[7]ಎನ್ನಾ[8]ಜ್ಞೆಯಂ ದೇವಿ[8] ನೀಂ ಮಿಾಱೆ ಸೈರಿಪೆನೆ |[7]
[9]ಮುನಿದೆಂ ಕುಡೆಂ ಕುಡೆಂ ಕಣ್ಣನೆಂದೆನಲಲ್ಲಿ
ಮುನಿದ ಪರಿಯಱಿದು[9] ಪಾರ್ವತಿ ನುಡಿದಳಂತಲ್ಲಿ |
ದೇವ ನೀಂ ಕುಡದಿರ್ದೊಡೆನ್ನ ಭಾಗದ ಕಣ್ಣ-
[10]ನೀವೆನಾನೆಂದೆ[10]ನುತ್ತೆಡದ [11]ಭಾಗದ[11] ಕಣ್ಣ- |
ನಿತ್ತೆನೆಲೆ ಮಗನೆ ಹೋಗಯ್ಯ ಆರೂರೊಳಗೆ
ಇತ್ತಪರು [12]ಮತ್ತೊಂದು ಕಣ್ಣನಾ ಪುರದೊ[12]ಳಗೆ |
ಎನಲೆಡದ ಕಣ್ಬಡೆದು ಪಡಿಯ ಹೊನ್ನಂ ಕೊಂಡು
ಮನವೊಸೆದು ಪಟ್ಟದಾನೆಯನಲ್ಲಿ ಬೆಂಕೊಂಡು |
ಮುಂತೆ ಪೆರುಮೆಳಲೆಯ ಕುಱುಂಬರ್ ಗುಡಿಯನೆತ್ತೆ
ಸಂತಸಂಬಡುತೆ ನಡೆ[13]ತಂದೊಂದು ಕಣ್ಬೆ[13]ತ್ತೆ- |
[14]ನಿ[14]ನ್ನಂಜೆನಿನ್ನಂಜೆನೆಂದೆನುತೆ ನಡೆತಂದು
[15]ಉನ್ನತಾನಂದಮಯನರ್ತಿಯಿಂದಂ ಬಂದು |[15]

---

1 ತನೆಯನೊರಲುತ್ತಿರಲು - - - (ಕ), ತನಯನೊದರುತ್ತಮಿರೆ ಕಣ್ಗೊಟ್ಟೊಡೆನಿಂತು (ಖ), ತನಯ ಬಳಲುತ್ತ ಕಂಣ್ಗೆಟ್ಟನೆಂತು (ಗ), - - - ಕಂಣ್ಗೊಡದೆ ನೀನಿಂತೆ (ಜ) ; ಈ ಪಂಕ್ತಿ (ಚ) ದಲ್ಲಿಲ್ಲ. 2 ಯಱಿಯೆ (ಕ), ಯೆಯೆತಿ (ಖ), ಯೆ (ಗ), ಯಲತಿ (ಜ). 3 ಳನಿವ (ಗ). 4 ಱ್ಯ (ಖ), ರು (ಗ), ಱು (ಚಜ). 5 ಈ ಪಂಕ್ತಿ (ಕಚ) ಗಳಲ್ಲಿಲ್ಲ; ಏನಾದಡಂ ಕಣ್ಣ ಕುದೆ ನೀನೆ ಬಲ್ಲಿಯನೆ (ಖ); ನೀನರಿಯೆ ಯಂನಾಣೆಯಿಟ್ಟು ತಪ್ಪುವನಿವನೆ (ಗ). 6 ಣೆ (ಗಚ). 7 ಈ ಪಂಕ್ತಿ (ಕ) ದಲ್ಲಿಲ್ಲ. 8 ಣೆಯಂ ಗೌರಿ (ಖಚ), ಣೆಯ ಗೌರಿ (ಗ). 9 ಮುಂದೆಂತುಟೆಂತು ತಪ್ಪಿದನಲ್ಲಿ ಮುನಿದೆನೀತನ ಪರಿಯನರಿದು ನಾನೆಲೆ ಗೌರ್‍ರಿಯನಲು ಮೃತ್ಯುಂಜಯನು (ಗ). 10 ನೀವೆನಯ್ಯೋ ಎ (ಖಚ), ನಾನೀವೆನೆಂದೆ (ಗ). 11 ದೆಸೆಯಣ (ಖಚ). 12 ಶಿವನೊಂದು ಕಣ್ಣನಾರೂರೊ (ಖ). 13 ದೊಂದು ಕಣ್ಬರೆ ಮ (ಕ), - - - ಕಣ್ಬ (ಖ). 14 ಇ (ಕಚ). 15 ಈ ಪಂಕ್ತಿ (ಚ) ದಲ್ಲಿಲ್ಲ.

ಪುರಹರನ ಸೆಜ್ಜೆಯೆನಿಸಿರ್ದ ತಿರುವಾಡೂರ
ಧರೆಗೆ ಕೈಲಾಸವೆನಿಸಿರ್ದ ತಿರುವಾರೂರ|
[1]ಹತ್ತೆ ಸಾರ್ದಲ್ಲಿ ಪೊಱವೊಳಲ ಬನದೊಳ್ ನಿಂದು[1]
ಚಿತ್ತದೊಳು ಪರವೆ [2]ಮುನಿಯಲ್ಕಾಗದಿನ್ನೆಂದು[2]|
ಮುನಿ[3]ಸುತಿ[3]ಳುಪಲು ಪೊನ್ನ ಪೆಟ್ಟಿಗೆಗಳಂ ಕೂಡಿ
[4]ಮನವಱಿವ ಮುಂತ್ರಿ ತುಂಬುರನನವಱೊಡಗೂಡಿ|[4]
ಕಳುಪಲಾತಂ ಬಂದು ತಿರುವೀಥಿಯೊಳ್ ಪೊಕ್ಕು
ಗಳಗಳನೆ ಪರವೆಯರ ಸದನಕ್ಕೆ ಕೈಮಿಕ್ಕು|
ಬಂದು ಪೆಟ್ಟಿಗೆಗಳ ಸಹಸ್ರಮಂ ತಂದಿಡಲು
ಅಂದು [5]ಪುರಜನವೆಲ್ಲ ವಿಸ್ಮಯಂಬಡುತಿರಲು[5]|
ಕಂಡು ಪರವೆ[6]ಯು[6] ವಿಲಾಸಿನಿಯು[7]ರೆಲ್ಲೆಯ್ತಂ[7]ದು
ಕಂಡೆವೆಮಗೀ ಪೆಟ್ಟಿಗೆಗ[8]ಳೆಂತು ಬಕ್ಕೆಂ[8]ದು|
ಬಡಗಣಿಂ ಬಂ[9]ದುದೇ[9] ಸಂಕಿಲಿಯ ಸೊಬಗಕ್ಕು
ಕಡುಹಿತ[10]ವನೀ[10] ತುಂಬುರನ ಮಂ[11]ತ್ರವಕ್ಕಕ್ಕು[11]|
ತಿರುವತ್ತಿಯೂರೇಕೆ ನಾವೇಕೆ ತೆಗೆಯಿವಂ
ಪರವೆ ಕಟ್ಟಭಿಮಾನಿ ಕೈಕೊಂಬಳೇ ಇವಂ|
ಒಡೆ ಕುಟ್ಟು ಹಱಿ ಚೆಲ್ಲು ಮುಱಿ ತಂದ [12]ಪೆಟ್ಟಿ[12]ಯಂ
ಕಡೆಗಣಿಸಿ ನೂಂಕು ಚೀ ಲಜ್ಜೆಗೆಟ್ಟಿಚ್ಛೆಯಂ|
ಎನುತೆ ಸಖಿಯರು ನೆರೆದು ಪೆಟ್ಟಿಗೆಗಳುಮನೊಡೆದು

---

1 ಈ ಪಂಕ್ತಿ (ಗ) ದಲ್ಲಿಲ್ಲ. 2 ಯರು ಮುನಿಯದಿರರಿನ್ನೆಂದು (ಕ), - - - ಗದೇನೆಂದು (ಗ). 3 ಸತಿ (ಖಗ), ಸಂತಿ (ಚ), ಸುದಿ (ಜ). 4 ಈ ಪಂಕ್ತಿ (ಗ) ದಲ್ಲಿಲ್ಲ. 5 ಜನವೆಲ್ಲವತಿ ವಿಸ್ಮಯಂ - - - (ಕ:ಗ), ಪುರಜನವೆಲ್ಲವ•ವಿಸ್ಮಿತಂಬಡಲು (ಖ), ಪುರಜನವೆಲ್ಲಂ ವಿಶ್ಮಯಂಬಡಲು (ಚ). 6 ಯರ (ಗಚ). 7 ರೆಲ್ಲೈ (ಕಚ), ರೈ (ಖ), ರೆಲ್ಲರೈ (ಗ), ರುಗಳೆಯ್ತಂ (ಜ). 8 ಳೆಕೆ ಬೇಕೆಂ (ಖ), ಯೆಲ್ಲಿ ಬಕ್ಕೆಂ (ಚ), ಳೆಂತುಂ ಬಕ್ಕೆಂ (ಜ). 9 ದವೆ (ಖ), ದವಿಲು (ಜ). 10 ನೀ (ಖ), ವನಿಂ (ಗ), ವ (ಜ). 11 ತ್ರಿತನವಕ್ಕು (ಕ), ತ್ರದಳವಕ್ಕು (ಗ), ತ್ರಿಯಕ್ಕಕ್ಕು (ಚ), ತ್ರವಿಂತಕ್ಕಕ್ಕು (ಜ). 12 ಪಚ್ಚೆ (ಗಜ).

ತ[1]ನತನ[1]ಗೆ ನವರತ್ನ ಸಂದೋಹಮಂ ತೆಗೆದು |
ಚೆಲ್ಲಿದರು ಕನಕರತ್ನಾಭರಣಜಾಲಮಂ
ಚೆಲ್ಲಿದರು ಯಕ್ಷಕರ್ದಮಗಂಧವೃಂದಮಂ |
ತಿರುವೀಥಿಯೊಳಗೆ ಪನ್ನೀರ ಹಳ್ಳಂ ಹರಿಯೆ
ಪರಿಪರಿಯ ಪುಣುಗು ಸಾದಿನ ಕೊಗ್ಗೆಸಱ್ ಸೆ[2]ರೆ[2]ಯೆ |
ಪರೆದ ಮುತ್ತುಗಳಾಲಿಕಲ್ಗಳಂತೊಪ್ಪಿರಲು
ಪರೆದ ಮಾಣಿಕವಿಂದ್ರಗೋ[3]ಪಂಗಳಂತಿ[3]ರಲು |
ಘುಡುಘುಡಿಸಿ ಹಲುವೊರೆವ ದನಿ ಮೊಳಗಿನಂತಿರಲು
ಒಡೆವ ಪೆಟ್ಟಿಗೆಯ ದನಿ ಸಿಡಿಲ ದನಿಯಂತಿರಲು |
[4]ಮಡದಿಯರ ಚೆಲ್ಲೆಗಣ್ಣೆಳಮಿಂಚಿನಂತಿರಲು[4]
ಸೆಡೆ[5]ಲ್ದ[5] ಮುಡಿಯೋರಣಂ ನವಿಲಾಟದಂತಿರಲು |
ಇಂತು ಮುನಿಸಿನ ವೃಷ್ಟಿ ಕಱೆದಂ[6]ತೆ ಯೊ[6]ಪ್ಪಿರಲು
ಕಂತುವಿನ ಜಗಳವಾ [7]ಹೂ[ರದಂ]ತೊಪ್ಪಿರಲು[7] |
ಈ ತೆಱದೊಳೆಲ್ಲವಂ ಚೆಲ್ಲಿ ಸತಿಯರು ಬಂದು
ಈತನೇ ತುಂಬುರನು ಮಂತ್ರಿ ನೀನೇ ಎಂದು |
ಕಟ್ಟಿ ಹೆಡಗಯ್ಯನಂಬುಜದ ಹೊಸನೂಲಿಂದೆ
ಮುಟ್ಟಿ ಹೊಡೆ ಹೊಡೆ ನೀಳ್ದ ಪುಷ್ಪಮಾಲೆಗಳಿಂದೆ |
ಕೊಂಡೊಯ್ದಶೋಕೆಗಳ ದಳ್ಳುರ[8]ಯ ನಡುವಿರಿ[8]ಸು
ಅಂಡಲೆದು ಬಯ್ವ [9]ಪುಂ[ಸ್ಕೊ]ೀಕಿಲನ[9] ಮುಂದಿರಿಸು |
ಕಡು[10]ಗಾಯ್ವ[10] ಬೆಳ್ದಿಂಗ[11]ಳೊಳ್ ನೂಂಕಿರೀ[11]ತನಂ

---

[1] ವತವ (ಕ). [2] ಗೆ (ಕಖಗ). [3] ಪದಂತೊಪ್ಪಿ (ಖ). [4] ಮಡದಿಯರ ಲೋಚನಂ ಮಿಂಚಿನಂತೊಪ್ಪಿರಲು (ಖಚ) ; ಈ ಪಂಕ್ತಿ (ಗ) ದಲ್ಲಿಲ್ಲ. [5] ಲ್ವ (ಗಚಜ). [6] ತಿರೊ (ಖಚ), ತೆವೊ (ಗಜ). [7] ಹಿಣಿಯೆಂತುವೊಪ್ಪಿರಲು (ಕ), ಹುವ್ವಿಂದಲೊಪ್ಪಿರಲು (ಖ), ಹೂವಿಂದವೊಪ್ಪಿತದೂ (ಗ), ಹೂತಂತಿತೊಪ್ಪಿರಲು (ಚ), ಹೂವ್ವಿಂದವೊಪ್ಪಿರಲು (ಜ). [8] ಯೊಳಗೆ ನಿಲಿ (ಖ). [9] ನವಕೋಕಿಲದ (ಕ), ಅರೆಗಿಳಿಗಳಂ (ಖ), ಪುಂಕೊಕಿಳದ (ಗ). ಸುಖಕೋಕಿಳದ (ಚ), ಪುಂಷ್ಕೋಕಿಲನ (ಜ). [10] ಗಾಯಿದ (ಗ), ಕಾದ (ಚ). [11] ಳೊಳಗಿರಿಸಿ ಈ (ಕ).

ಬಿಡದೆ[1]ಸು[1]ವ ಕಾಮಂಗೆ ಗುಱಿಮಾಡಿ[2]ರೀ[2]ತನಂ |
ಎಂದಲ್ಲಿ ಪಲವುಂ ನಿರೋಧಂಗಳಂ ಮಾಡೆ
ನಿಂದು ಸತಿಯರ್ ನೊಂದು ಸುಣ್ಣಟಕಿಗಳನಾಡೆ |
ಕದ್ದೋಡಿದಂ ನಂಬಿಯಲ್ಲಿಗಾ ತುಂಬುರಂ
ಎದ್ದೋಡಿದಂ ಪುರದ ವನದತ್ತ ತುಂಬುರಂ |
ಬಂದು ಸೌಂದರನಡಿಗೆ ಬಳಲುತ್ತವೆಱಗಿದಂ
ನಿಂದು ಬಿನ್ನೈಸಿದಂ [3]ತನ್ನ[3] ಭಂಗಮನದಂ |
ದೇವ ಕೋಳಾಹಳವನೇನೆಂಬೆನಿಂ[4]ದ[4]ಲ್ಲಿ
[5]ತೀವಿರ್ದ[5] ಪೆಟ್ಟಿಗೆಗಳಂ ನೋಡಿ [6]ಕಂಡ[6]ಲ್ಲಿ |
ಮುಱಿದು ಪೆಟ್ಟಿಗೆಗಳಂ ರತ್ನಂಗಳಂ ಚೆಲ್ಲಿ
ಹಱಿದು ಹಾರಂಗಳಂ ತೊಡಿಗೆಯಂ ಬಿಸುಟಲ್ಲಿ |
ಭುಗಿಲೆನುತ್ತಿರ್ದ[7]ಪುದು[7] ಪರವೆಯರ [8]ಪರಿ[8]ಜನಂ
ಬಗೆಗೊಳ್ಳದಿರ್ದ[9]ಪುದು[9] ನೆರೆ[10]ದ ವಿರಹದಿ[10] ಜನಂ |
ಎನಗಾದ ಭಂಗವ[11]ನದೆಂತು[11]ಸುರ್ದಪೆಂ ದೇವ
ನಿನಗೆಂದ ಪರಿಭವವನೆಂತು ನುಡಿ[12]ವೆಂ[12] ದೇವ |
ತಿರುವೀಥಿಯೊಳ್ ನಿ[13]ಮ[13]ಗೆ ಸುಳಿಯಬಾರದು ದೇವ
ತರುಣಿಯರ ತಂಡದೊಳ್ ಮಿಸುಕಬಾರದು ದೇವ |
ಎನೆ ತಿರುಗಿ ಮತ್ತೊಂದು ವೀಥಿಯೊಳ್ ನಡೆಗೊಂಡು
ಅನು[14]ಮಿಸು[14]ತೆ ಶಿವ[15]ನಿಳಯ[15]ದತ್ತಲ್ ಮನಂಗೊಂಡು |
ಬಂದು ದೇವಾಲಯದ ಮುಂದೆ ಗಜದಿಂದಿಳಿದು
ನೊಂದು ಮಿಗೆ ರಂಗಮಂಟಪವನಾಗಳೆ ಕಳಿದು |

---

1 ಸ (ಖ). 2 ಈ (ಕ), ಯಿಾ (ಗ). 3 ಮನದ (ಖ), ಮದನ (ಚ). 4 ದಿ (ಕಚ), ತಿ (ಗ). 5 ನೀವಿತ್ತ (ಖ). 6 ಕೊಡಲ (ಖ). 7 ಪದು (ಕ), ರಹ (ಗ), ಪರು (ಚ). 8 ಪುರ (ಖ). 9 ಪರು (ಚ). 10 ದ ವಿರಹಿತ (ಖ), ದು ವಿರಹಿ (ಗ), ದ ನೆರವಿಯ (ಚ). 11 ವದನೆದೆಂತು (ಕ), ನೆಂತು (ಚ), ದೆಂತು (ಜ). 12 ದಪೆ (ಕ). 13 ನ (ಖ). 14 ಮಿಷು (ಕ), ವಿಸು (ಗ), × ಶು (ಚ). 15 ಲಿಂಗ (ಜ).

[1]ನಡೆನಡೆದು ಮಯ್ಯಿಕ್ಕಿ ನುಡಿನುಡಿದು ಮಯ್ಯಿಕ್ಕಿ[1]
ಮೃಡನೆ ಶರಣಾಗು ಶರಣಾಗೆನುತೆ ಮಯ್ಯಿಕ್ಕಿ |
ನಿಂದಿರ್ದು ಕೈಮುಗಿದು ಪಲ್ಗಿರಿದು ತಲೆಗರೆದು
ಮುಂದುಗೆಟ್ಟಳವಳಿದು ಭಯುವಿಡಿದು [2]ವೈ[2]ಗರೆದು |
ಶಶಿಧರನೆ ಪರವೆಯೊಲ್ಲದೆ ಕಾಡುತಿರ್ದಪಳು
ಪಶುಪತಿಯೆ ಕೇೞ್ ಪರವೆ ಪುಗಲೀಯದಿರ್ದಪಳು |
ಎಂದಡಭವಂ ಕಾಡಲೆಂದಲ್ಲಿ ಸುಮ್ಮನಿರೆ
ಒಂದು[3]ವುಂ[3] ಮಱುಮಾತುಗೊಡದೆ ನೋಡುತ್ತಮಿರೆ |
ಕೊಡು[4]ಕೊಡಿನ್ನೇನು ಪ್ರಮಾಣಪತ್ರವ[4] ದೇವ
ಬಿಡು ಬಿಡೈ ನೀನೆನ್ನನಾಳಲಾ[5]ರ್ಪೆ[5] ದೇವ |
ಇನಿತು [6]ಬೇಗಂ[6] ಸೈರಿಸಿ[7]ರ್ಪರೇ[7] ಎಲೆ ದೇವ
ಇನಿತು [8]ಬೇಗಂ[8] ಕೇೞ[9]ದಿರ್ಪರೇ ಎಲೆ[9] ದೇವ |
ಹೊನ್ನುಮಂ ತೊಡಿಗೆಯುಂ ಚೆಲ್ಲಿದಳೆಲೇ [10]ತಂದೆ[10]
ರನ್ನಮಂ ರಜತಮಂ ಸೂಸಿದಳೆಲೇ [10]ತಂದೆ[10] |
ಆನೇಕೆ ಪರವೆಯೇಕೆ[11]ನಗೆ ಪತ್ರವೆ ಸಾಲ್ಗು[11]
[12]ಆನೇಕೆ ನೀನೇಕೆ ಎನಗೆ ಪತ್ರವೆ ಸಾಲ್ಗು |[12]
ಎನೆ ದೇವರೆಂದರೆಲವೋ ಸೂರುಳಂ ವಿೞಾಱು
ಮನವಾರೆ ಕಣ್ಗೆಡಿಸಿಕೊಂಡೊಂದು ಕೋಲೂಱು |

---

[1] ನಡದು ಮೈಯಿಕ್ಕಿ ನುಡಿನುಡಿದು ತನುಮನ ಉಕ್ಕಿ (ಖ), ನಡದು ಮೈಯಿಕ್ಕಿ - - - (ಗ); ನಡತರುತ ಮಯಿಕ್ಕಿ (ಚ). [2] ಸೈ (ಗಚ). [3] ವಂ (ಚಜ). [4] ಕೊಡೆನ್ನಯ ಪ್ರಮಾಣದ ಪತ್ರವಂ (ಖಚ), ಕೊಡೆನ್ನಯ ಪತ್ರಪ್ರಮಾಣದ ಪತ್ರವಂ (ಗ). [5] ರ್ಪಿರೆ (ಕ), ಱ್ಯೆ (ಖ), ರ್ಪರೆ (ಗ), ರ್ಪಯಿ (ಚ). [6] ಬೆಗಂ (ಕಚ), ಬೆಸಗಂ (ಗ), ಬೆರಕಂ (ಜ). [7] ರ್ಪನೇ (ಖ). [8] ಬೆಗಂ (ಕಚ), ಬೆರಕಂ (ಜ). [9] ದೆಂತಿಹೆಯಲೆ (ಗ), ದಂತಿರ್ಪರೆಲೆ (ಚ). [10] ದೇವ (ಖಜ). [11] ಪತ್ರಕೊಟ್ಟರೆ ಸಾಕು (ಗ). [12] ಆನೇಕೆ ನೀನೆ<ವೆ>ೀಕೆ ಯೆನಗೆ - - - (ಕಚ), ನಾನೇಕೆ - - - ಸಾಕು (ಖ), ಆನೊಲ್ಲೆನೊಲ್ಲೆ ನಿಂನಾಳುತನವಂ ಸಾಕು (ಗ).

ಬಂದಿಲ್ಲಿಯುಂ ಪರವೆ ಮುನಿದಿರ್ದಳೆಂದೆನಗೆ
ಎಂದ[1]ಡಾಂ ನಿನ್ನನೇ[1]ಸೆಂಬೆನಿದು ಪೊಸತೆನಗೆ |
ಮಾಣ್ಬರೇ ಸತ್ಯಹೀಸಂಗೆ ಸೆಱೆ ಮು[2]ಳಿ[2]ವುದಂ
ಕಾಣ್ಬರೇ ಅನ್ಯಾಯ[3]ವರ್ತಿಯಿಂತಿರ್ಪುದಂ[3] |
[4]ಎಸ[4]ಗೆರಡುವಂ ಕೊಂಡು [5]ಕಾರ್ಯ[5]ವೇಸಲೆ ಮಗನೆ
ನಿ[6]ನ[6]ಗೆ ಪಡಿವೊನ್ಗಳಿವೆ ಕೊಂಡುಹೋಗೆಲೆ ಮಗನೆ |
ಎನೆ ಬೇಡ ಬೇಡ ತೊತ್ತಿ[7]ನ ಕೂಡೆ[7] ಮ[8]ಚ್ಚ[8]ರಂ
ಎನಗೆನ್ನ ಪತ್ರವಂ ಕೊಡು ಬೇಗ [9]ಚೆ[9]ಚ್ಚರಂ |
ಉಂಟುಂಟು [10]ಅ[10]ನ್ಯಾಯವರ್ತಿ[11]ಯಾಂ ತ[11]ಪ್ಪುವುದೆ
ಉಂಟುಂಟು ಈ ಮಾತು ನಿನಗಲ್ಲದೊಪ್ಪುವುದೆ |
ಎಲುದೋ[12]ಱ[12] ಸರಸವಾಡುತ್ತಿ[13]ರ್ಪರೇ ತಂದೆ[13]
ಕೊಲು[14]ವುದೈ ಇ[14]ದಱಿಂದ ಕಾಡಲೇ[15]ಕೆಲೆ ತಂದೆ[15] |
ಮರದಡಿಯೊಳಿರವೇಳ್ದೊಡೆನಗೆ [16]ಆಗಲಿಯೆಂದು[16]
ಚರಿತದಿಂ ಮ[17]ತ್ತ[17]ವರ್ಗೆ ಪೇಳಲೇಕೈ [18]ಬಂದು[18] |
ಕೂಸಂ ಚಿವುಂಟುವೈ ತೊಟ್ಟಿಲಂ ತೂಗುವೈ
ಆಸುರಂ ಮಾಡಿ ನೀನೆನ್ನೊಡ[19]ನಿದೇ[19]ಗುವೈ |
ಬೇಡ ಬೇಡಾನಿಂತಿದೆಲ್ಲವಂ ಬಲ್ಲೆನೈ
ನೋಡುವಡೆ ತಪ್ಪನಾ ನಿನ್ನಮೇಲಿಡುವೆನೈ |

---

1 ಡಾನಿನ್ನೇನ (ಖಗಚ). 2 ನಿ (ಖಗಚ). 3 ವರ್ತಿಯಿಂದಿರ್ಪುದಂ (ಕ), ವರ್ಥಿಯ್ಯೆ ತಪ್ಪೂದು (ಖ), ಅರ್ತಿಯಂತಿಪ್ಪದಂ (ಚ), ವರ್ತನೆಯೊಳಿರ್ಪುದಂ (ಜ). 4 ನಿನ (ಖ), ಎಮ (ಚ). 5 ಕೆಲಸ (ಜ). 6 ಮ (ಚ). 7 ನೊಳೇಕೆ (ಕಖ). 8 ತ್ಸ (ಕಗಚಜ). 9 ಬೆ (ಖ), ಚ (ಗ). 10 ವ (ಖಗಚ). 11 ನಾಂತ (ಖ), ಯಿಂತೊ (ಗ). 12 ರಿ (ಕಗ), ಱಿ (ಖ), ಱೆ (ಚಜ). 13 ರ್ಪಿರೆಲೆ ತಂದೆ (ಖ), ಪ್ಪರೇ ದೇವ (ಚ), ರ್ಪರೆಯೆಲೆ ತಂದೆ (ಜ). 14 ವುದೇನಿ (ಕಜ), ಉದ್ಯೆಯಿ (ಖ), ದೇವಯಿ (ಗಚ). 15 ಕೈ ದೇವ (ಚ). 16 ಯಾಗಲಿಯಂದೆ (ಕ), ನಿನಿಹೆನೆಂದು (ಖ). 17 ತ್ತಿ (ಕ). 18 ತಂದೆ (ಕ), ಎಂದು (ಖಚ), ಯಂದು (ಗ). 19 ನೆದೇ (ಖಚ), ನೆವೇ (ಗ).

ಪ್ರೇರ[1]ಕಂ[1] ನೀನೆಂದೊಡೆನ್ನ ಕಾರಣವುಂಟೆ
ಕಾರ[2]ಣಕೆ[2] ಕಾರಣಂ ನೀನೆಂದಡೆನಗುಂಟೆ |
ಸೂರುಳಿ[3]ಸುವಂ[3] ನೀನೆ ತಪ್ಪಿಸುವವಂ ನೀನೆ
[4]ಹಾರೈಸುವಂ ನೀನೆ ಹಾಡಿಸುವವಂ ನೀನೆ |[4]
[5]ಪುಟ್ಟಿಸು[6]ವ ಭವ[6] ನೀನೆ [7]ರಕ್ಷಿಸುವ ಮೃಡ[7] ನೀನೆ
ಪುಟ್ಟಿತೆಲ್ಲವನರೆದು [8]ಸಣ್ಣಿಸುವ ಹರ[8] ನೀನೆ |[5]
ನೆನಯಿ[9]ಪ[9] ಪ್ರೇರಕಂ ನುಡಿ[10]ಯಿಪ ಗಿರಿಶ[10] ನೀನೆ
ಅನುನಯದಿ ನಡಯಿಸುವ ಯಂತ್ರವಾಹಕ ನೀನೆ | [11]+
ಎನ್ನ ಕಾರಣವಿಲ್ಲ ಕೊಡು [12]ಕೊಡೈ[12] ಪತ್ರಮಂ
ಇನ್ನೇಕೆ ಶಿವನೆ ಕೊಡುವುದು ಲೇಸು ಪತ್ರಮಂ | [13]+
ಎನ[14]ಲದಕ್ಕು[14]ತ್ತರಂಗಾಣದೆ ಮಹೇಶ್ವರಂ
ಮನದೊಳಗೆ ಮೆಚ್ಚುತ್ತೆ ನುಡಿದಂ ಮ[15]ಹೇ[15]ಶ್ವರಂ |
ಮಗನೆ ಕೋಪಿಸಲೇಕೆ ಹೋಗಿಬಂದಪೆವಯ್ಯ
[16]ಮೃಗನೇತ್ರೆ ಪರವೆಯಂ[16] ಬೇಡಿಕೊಂಡಪೆವಯ್ಯ |
ಎಂದು ನಂದೀಶ್ವರನ ಕೈವಿಡಿದು ಶಂಕರಂ
ಬಂದನೀ ಧರಣೆ ಪುಳಕಿಸುತವಿರಲೀಶ್ವರಂ |
ಚಂದ್ರಮಂಡಲದ ಹೊಸ ಹಾವುಗೆಗಳಂ ತಂದು

---

1 ಕನು (ಕಖಗಚ) 2 ಣಿಕ (ಕ). 3 ಡಿಪಂ (ಖ). 4 ಈ ಪಂಕ್ತಿ (ಖ) ನಲ್ಲಿಲ್ಲ. 5 ರಕ್ಷಿಪ ಮೃಡಂ ನೀನೆ ರಕ್ಷಿಪ ಹರಂ ನೀನೆ| ಪುಟ್ಟಿಪ ಹರಂ ನೀನೆ ಸೃಷ್ಟಿಸಂಹರ ನೀನೆ| (ಚ). 6 ವವಂ (ಗ). 7 ರಕ್ಷಿಪ ಮೃಡಂ (ಖ), ಪಾಲಿಸುವ ಮೃಡ (ಗ). 8 ಸಣ್ಣಿಪ ಹರಂ (ಖ), ಸಂದಣಿಪ ಹರ (ಗ). 9 ಪಂ (ಗ). 10 ಸುವೀಶ್ವರ (ಕ), ವ ಸರಸಂ (ಖ), ಪ ಗಿರಿಶಂ (ಗ), ವ ಶಬ್ದಂ (ಚ), ಇಪ ಗಿರಿಶ (ಜ). 11 + ನೀ ನುಡಿಸೆ ನುಡಿದೆನಾಂ ನೀ ನಡಸೆ ನಡದೆನಾಂ| ನೀನೆ ಕಳುಹಲು ಹೋದೆ ನೀಂ ಕರೆಯೆ ಬಂದೆನಾಂ| (ಚ). 12 ವುದೆ<ದೈ> (ಗಚ). 13 + ಸುಖಮಾಡಿ ದುಃಖಿಯಂ ಮಾಡಿಪಡೆ ಸೈರಿಪೆನೆ| ಸುಖಿಮಾಡಿ ಸುಖಿಯೊಡನೆ ಕೂಡದಡೆ ಸೈರಿಪೆನೆ| ನೀವಿಂತು ಕಾಡುವಡೆ ಬಿಡುವೆನೇ ಪ್ರಾಣಮಂ| ನೀವಿಂತು ಮಾಡೆ ನಿಮಗಂ ಕೊಡುವೆ ಪ್ರಾಣಮಂ| ಸುಖರೂಪಿ ಸುಖಮಯನೆ ಸುಖವ ತಪ್ಪಿಸುವರೇ| ಸುಖವನಿಂತುಂ ಸುಖಿಸಿ ಸುಖವ ತಪ್ಪಿಸುವರೇ| (ಚ). 14 ರಿಪಕೆವು (ಗಚ). 15 ದೀ (ಚ). 16 ಮಗನೆ ಪರವೈರುಮಂ (ಕ).

ಇಂದ್ರನಳವಡಿಸಲ್ಕೆ ಮೆಟ್ಟಿಕೊಳುತುಂ ಬಂದು|
ತಿರುವೀಥಿಯೊಳ್ [1]ನಡೆ[1]ದನಾ ಭಕ್ತವ[2]ಲ್ಲಭಂ[2]
ಹರುಷದಿಂ ಹಿಗ್ಗುತ್ತೆ ವೇದ[3]ತ[3]ತಿದುರ್ಲಭಂ|
ಬಂದು ಪರವೆಯರ ನಿಳಯದ [4]ಚೆಲ್ವ[4] ಬಾಗಿಲೊಳು
ನಿಂದು ಕದವಂ ತೆಱೆಯ[5]ಪೇಳೆ ಸಂತೋ[5]ಷದೊಳು|
ಕೇಳ್ದಲೆಲೆ ಆರೂರ ಶಿವನ ದನಿಯಾದಪುದು
ತಾ[6]ಳ್ದ[6] ಸುರಕುಜಕುಸುಮಸೌರಭಂ ಬಂದಪುದು|
ಎನುತೆ ಮುಚ್ಚುಳ [7]ತೆಗೆ[7]ದು ಘನಮಹಿಮನಂ ಕಂಡು
ಮನವಾರೆ ಮಯ್ಯಿಕ್ಕಿ ಮೋಹವಿಡಿ[8]ದೆಡೆ[8]ಗೊಂಡು|
ಹರಿಬೊಮ್ಮ[9]ಱಿಯದ ಪದಂಗಳೆಯ್ತಂದವೇ
[10]ವರವೇದವಱಿಸುವ ಪದಂಗಳೆಯ್ತಂ[10]ದವೇ|
ಸಕಲ [11]ಸುರ[11]ಮುನಿಜನಧ್ಯಾನವೆಯ್ತಂ[12]ದವೇ[12]
ಸಕಲ ಭಕ್ತಾಳಿಯಭಿಮಾನವೆಯ್ತಂ[12]ದವೇ[12]|
ಪರಮಭಕ್ತರ ಹೃನ್ನಿವಾಸ[13]ವೆಯ್ತಂದವೇ[13]
ತಿರುವೀಥಿಯೊಳ್ ನಡೆದು ಮೃದು[14]ಪದಂ[14] ನೊಂದವೇ|
ನಂಬಿಯಣ್ಣಂಗೆ ಕರುಣಿಸಿದವೇ [15]ಶ್ರೀಪದಂ[15]
[16]ಇಂಬಱಿವ ಭಕ್ತಿಗಾಳಾದವೇ ಶ್ರೀಪದಂ|[16]
  ಎಂದು ಮ[17]ಣಿ[17]ಸಿಂಹಾಸನ[18]ದೊಳು[18] ಬಿಜಯಂಗೆಯ್ಸಿ
ತಂದ ಪನ್ನೀರಿಂದ ಚರಣಮಂ ಸಿಂಗರಿಸಿ|

---

[1] ಬಂ (ಕ). [2] ತ್ಸಳಂ (ಖ). [3] ಕ (ಗಚ). [4] ಚೆಲ್ವು (ಕ), ಚಲುವ<ವೆ> (ಖಗ), ಚೆಲುವ (ಚ). [5] ವೇಳ್ದನತಿಹರು (ಕ). [6] ಳ್ದು (ಖ). [7] ದೆಗ (ಕ), ದೆಱ (ಖಚ), ದೆರ (ಗ), ತೆಗ (ಜ). [8] ದೊಡ (ಕಖ). [9] ಬ್ರಹ್ಮರ (ಖ), ಬ್ರಂಹ್ಮರ (ಗ), ಬೊಂಮುವ (ಚ). [10] ವರನಿಗಮುವರಸಿಕಾಣದ ಪದಂ ಬಂ (ಗ), ಸುರರಸುರರಱಿಯದಂಗಳೈ (ಚ). [11] ಮನು (ಗಚ). [12] ದುದೇ (ಗಚ). [13] ನೈತಂದನೆ (ಗ), ವೆಯ್ತಂದುದೇ (ಚ). [14] ಪಾದ (ಗಚ). [15] ಪದತಳಂ (ಖ). [16] ಈ ಪಂಕ್ತಿ (ಕ) ದಲ್ಲಿಲ್ಲ; - - - ಭಕ್ತಗಾಳಾದವೆ ಪದತಳಂ (ಖ), - - - ಭಕ್ತಗಾಳನೆ ಶ್ರೀಪದಂ (ಗ), ಯಿಂಭಱಿಯದ ಭಕುತಿಗಾ - - - (ಚ). [17] ಣಿಖಚಿತ (ಕ). [18] ಕ್ಕೆ (ಖಗಚ).

ದೇವ ಬಿಜಯಂಗೆಯ್ದು ಕರುಣಮಂ ಕರುಣಿಪುದು
ದೇವ ನಡೆತಂದ ಕೃಪೆಯಂ ಕರುಣಿ ಬೆಸ[1]ಸು[ವು][1]ದು |
ಎಂದು ಪರವೆಯ[2]ರ ತಾಯ್[2] ಬಿನ್ನಪಂಗೆಯ್ವುತಿರೆ
ಎಂದನಭವಂ ವಾ[3]ಗ್ವಿ[3]ಳಾಸಮಂ ಚೆಲ್ಲುತಿರೆ |
ನಂಬಿ ಬಂದೊಡೆ ಮು[4]ನಿದಿ[4]ರೆಂದು ಕೇಳ್ದವು ಕರಂ
ನಂಬಿರ್ದ ಪರವೆಗಿ[5]ವನಿಂತು ಮಾಳ್ಪರ್[5] ಕರಂ |
ಲೇಸುಮಾಡಿದಿರಿ ಅವನೊ[6]ಡೆದು[6] ಹಱಿದುಂ ಮುಱಿದು
ಲೇಸಾದುದಂತಲ್ಲದಱಿ[7]ಯು ಸಿತಗಂ[7] ಮಱೆದು |
ಎನ್ನಾಜ್ಞೆಯಂ ಮೀಱಿ [8]ಕೀಱಿ[8] ನಡೆವಂ ನೋ[9]ಡ[9]
ಎನ್ನನೊಳಗಾಗಿ ಉರವಣಿಸಿ [10]ನುಡಿವಂ ನೋಡ[10] |
ಮರುಳವಂ ಸಿತಗನವನೊಳು ಗುಣವನಱಿ[11]ಸುವರೆ[11]
ತರಳನವನತಿಮುಗ್ಧನೊಳು ತಪ್ಪನಱಿ[11]ಸುವರೆ[11] |
ಅವನ ಗುಣ[12]ವೇ[12]ವುದೆನ್ನಂ ನೋಡಿ ಸೈರಿಪುದು
[13]ಅವನೊಂ[14]ದನ[14]ಱಿಯನೆನ್ನಂ ನೋಡಿ ಸೈರಿಪುದು |[13]
ನಂಬಿಯಂ [15]ನೋಡಡೆನ್ನಂ[15] ನೋಡಲಾಗದೇ
ನಂಬಿಯಪರಾಧ[16]ವಾಂ ಬ[16]ರೆ ಮಱೆದು ಹೋಗದೇ |
ಎಂದು ಮು[17]ನಿ[17]ಸಂ ತಿ[18]ಳಿ[18]ಪುತಿರ್ದ ಶಿವನೊಪ್ಪಿದಂ
ಇಂದುಧರನಾ ಪರವೆಯರ ಮನೆಯೊಳೊಪ್ಪಿದಂ ||

ಪಂಚದಶ ಸ್ಥಲಂ

---

[1] ಸೂ (ಕಖಚಜ), ಸುವ (ಗ). [2] ತಾಯಿ (ಖಗಚ), ರ ತಾಯಿ (ಜ). [3] [ಗ್ ವಿ] ? [4] ನಿದ (ಖಚಜ), ಳಿದಿ (ಗ). [5] ವನಿನಿತು ಮಾಳ್ಪನೆ (ಕ), ನಿತಂ ಮಾಳ್ಪರೆ (ಖ), ಗಿವನಿಂತು ಮಾಳ್ಪನೆ (ಗಚ). [6] ಡನೆ (ಕಗ), ಡದು (ಖಚ). [7] ದು ಸೆಡದುಂ (ಖ), ದು ಸೆಡೆಯಂ (ಗ), ದು × ಡೆಯಂ (ಚ). [8] ಕಿಱಿ<ರಿ>ದು (ಖಗ). [9] ಡೆ (ಕ). [10] ನಡೆವಂ ನೋಡೆ (ಕ). [11] ಸೂದೆ (ಕ). [12] ವಾ (ಖ). [13] ಈ ಪಂಕ್ತಿ (ಗ) ದಲ್ಲಿಲ್ಲ. [14] ದಂ ವ (ಚ); [ದುವ] ? [15] ನೋಡಲೆನ್ನಂ (ಖ); (ಗ) ದಲ್ಲಿಲ್ಲ. [16] ವಂ ನೆ (ಗ). [17] ಳಿ (ಖಚ). [18] ಳು (ಖಚಜ).

೧೭ನೆಯ ಸ್ಥಲ

ಭಕ್ತನಿಧಿ ಭಕ್ತಪೂಜಾ-
ಯುಕ್ತಂ ಭ[1]ಕ್ತಾ[1]ನುಕಂ[2]ಪಿ[2] ಭ[1]ಕ್ತಾ[1]ನಂ[3]ದಂ |
ಭಕ್ತ[4]ಜ[4]ನೋತ್ಸವಪೂ[5]ರಿ[5]ತ-
[6]ಚಿತ್ತಂ[6] [3] ಪರವೆಯರ ಮುನಿಸ ತಿ[7]ಳಿಪು[7]ತ್ತಿರ್ದಂ ||

ಇಂತು [8]+ವಿರೂಪಾಕ್ಷಂ ಪರವೆಯರ ಮಾತೆಗೆ ಮುನಿಸು ಬೇಡೆಂದು ಬೆಸೆಸುತ್ತಿರಲಾಕೆ ಇಂತೆಂದಳು [9]ದೇವಾ ದೇವರ[9] ಕುಮಾರನಪ್ಪ ಸೌಂದರ ಪೆರುಮಾಳೆ ತ[10]ರಳನುತ್ಪಾತ[10]ಸ್ವತಂತ್ರನಪ್ಪ ಕಾರಣದಿಂ ನಿಮ್ಮಡಿಗಳಾಜ್ಞೆ ಯಿಂದೊಂದುವಂ ಕುಂ[11]ದ[11] ನುಡಿಯಲಮ್ಮೆವು ಅದಲ್ಲದೆ[12]ಯುಂ ದೇವ[12] ಬಡಗಲ್ ಬಿಜಯಂಗೆಯ್ದಿರ್ದ ಮೂಱು ವರುಷಂ [13]+ವಗಳ್ಗೆ ನೂಱು [14]ವರುಷ[14]ವಾದುದು- ಆ ಪರವೆ[15]ಯು[15] ವಿರಹಸಂತಾಪವನೇ[16]ನಂ ಬಿನ್ನವಿ[16]ಪೆಂ ದೇವ ನಂಬಿಯಣ್ಣನ[17]ನ[17]ಗಲ್ದ ದಿಸಂ ಮೊದಲಾಗಿ ಶಿವ[18]ಭಕ್ತಿ[18]ಯೊ[19]ಳೋ ಲಾಡುತಿರ್ದ ಕಡುಭ[19]ಕ್ತನಂತೆ ಹಸಿವುಂ ತೃಷೆಯುಂ [20]ಒಡನೊಡನಗಲ್ದ[20] ವಿರಹ[21]ವಿಹ್ವಳೆಗೆ[21] ಶಿಳೀಮುಖಂಗಳ ಕೋಕಿಳಂಗಳ ಕೊಳರ್ವಕ್ಕಿಗಳ [22]ಕ[22]ಳ ರವಂ ಶಿವದೂಷಕರ ನುಡಿಗೇಳ್ದ ಸದ್ಭಕ್ತನಂತೆ ಕಿವಿಯೇಱು [23]ಮತ್ತಂ[23] ದೇವ

---

[1] ಕ್ತ್ಯ (ಕ). [2] ಜ (ಖ). [3] ದಾಶಕ್ತಂ ಮುಕ್ತಿಯ ನೆಲೆವನೆ ಶಿವಪತಿ ಭಕ್ತಿಯ (ಚ). [4] ಮ (ಕಖಜ). [5] ಜಿ (ಕ). [6] ಭಕ್ತಂ (ಕಖಗ). [7] ಳುಹು (ಗ), ಳುಪು (ಚಜ). [8] + ಶ್ರೀ (ಗ). [9] ದೇವದೇವ (ಗ). [10] ರುಣನು (ಖ), ರಳನುಂ (ಗಚ). [11] ದಂ (ಚ). [12] (ಖಗ) ಗಳಲ್ಲಿಲ್ಲ. [13] + ಎನ್ನ (ಖ). [14] ಬರಿಸ (ಕ). [15] ಯರ (ಖಗಚಜ). [16] ನೆಂದು ಬಂಣ್ಣಿ (ಖ). [17] (ಕಚ) ಗಳಲ್ಲಿಲ್ಲ. [18] ಭಕ್ತಿಗೋಷ್ಠಿ (ಖ); ಗೋಷ್ಠಿ (ಗಚ). [19] - - - ತ್ತಿರ್ದ ಸದ್ಭ (ಖ), ಳೆಲ್ಲ ಸದ್ಭ (ಗ), ಳಲ್ಲದಿರ್ದ ಪದುಭ (ಚ), - - - ತಿರ್ದ ಭ (ಜ). [20] ವೊಡನಗಲ್ದ (ಕ), ನೋಡನೊಡಲಗಲ್ದ (ಖ), ವಡನೊಡನಗಲ್ದ (ಗ), × ಡನಗಲ್ದು (ಚ). [21] ವಿಂಹಳೆಯಂತೆ (ಗ), ವಿಂಹಳೆಯಾಗಿರ್ದಪಳು (ಚ). [22] ಗ (ಖ). [23] ಮುತ್ತ (ಗ); (ಚಜ) ಗಳಲ್ಲಿಲ್ಲ.

ಬಾಳೆ ಚೂತವೆಳಲತೆಯಶೋಕೆ ಹಂಸೆ ಮಯೂ[1]ರಾದಿ[1]ಗಳ ಕಾಣ್ಕೆಯೆಂಬುದು ಶಿವಭಕ್ತಿಯಿಲ್ಲದ ಹಾಳೊಡಲ್ಗಳಂ ಕಂಡ [2]ಶಿವ[2]ಭಕ್ತನಂತೆ ಕಣ್ಣೇಱು ದೇವ [3]ಹೂಸುವ ಚಂದನವೊತ್ತುವ ಪದ್ಮಪತ್ರಂ ತೞಿವ ತಿಳಿನೀರ್ಗಳು ಕಾಯ್ವ ಬೆಳ್ದಿಂಗಳು ಬೀಸುವ ಮಂದಾನಿಲನಿಂತಿವ[4]ಱು[4] ಸೋಂಕೆಂಬುದು ಭವಿಗಳಂ ಸೋಂಕಿದ ಸತ್ಯಶರಣನಂತೆ ಮಯ್ಯೇಱು [5]ದೇವ[5] ಸವಿವ ಪಯ್ಯಂ ತವರಾಜಂ [6]ತನಿ[6]ವಣ್ಗಳು ಶಿವಾರ್ಪಿ[7]ತವಲ್ಲದುದಂ ಸವಿದ[7] ಶರಣನಂತೆ ನಾಲಗೆಯೇಱು[3] ದೇವ ಯಕ್ಷಕರ್ದಮ[8]ಕದಂಬ[8]ಪುಷ್ಪಂಗಳಿಂ ತೀಡುವ ತನಿಗಂಪು ಹರಂಗಿಱಿಯು[9]ದ[9] ಪರಿಮಳವನಾ[10]ಘ್ರಾಣಿ[10]ಸಿದ ಶರಣನಂ[11]ತೆ ಮೂಗಿನೇಱು[11] ಮತ್ತಂ † ಬಿಡದೆಸುವ ಕಾಮ[12]+ನಂಬುಗಳು ಪರದೈವಂ [13]ಚಿತ್ತದೊಳ್[13] ಪೊಳೆದ [14]ಸತ್ಯ[14]ಶರಣನಂತೆ ಮನದೇಱು ಇಂತು ದೇವ ಕಾಮನ ಪರಿವಾರ

---

[1] ರ (ಕ). [2] (ಖಗಚ) ಗಳಲ್ಲಿಲ್ಲ. [3] - - - ಪದುಮಪತ್ರಂ ತಳಿವ ಆಲಿವರಲ ಪಂನೀರುಂ ಸಯಿತ್ಯೋದಕಂಗಳಂ ಕೂಡಿ ತಳಿವ ನೀರ್ಗಳುಂ ಕಾಯ್ವ ಬೆಳುದಿಂಗಳುಂ ಬೀಸುವ ಮಂದಾನಿಲಂ ಮೊದಲಾದ ಯಿವರ ಸೊಂಕೆಂಬುದು ಭವಿಗಳಂ ಸೊಂಕಿದ ಸತ್ಯಸರಣನಂತೆ ಮೆಯ್ಯೇಱುಂ ಮತ್ತಂ ಸವಿವ ಚಿಲುಪಾಲುಂ ತವರಾಜ ಸಕ್ಕರೆಯುಂ ಮಾವುಪಲಸುಕದಳಿ ಪಳಂ ತನಿವಂಣುಗಳುಂ ಶಿವಾರ್ಪಿತವಲ್ಲದುದಂ ಶವಿವ ಶರಣನಂತೆ ನಾಲಗೆಯೇಱುಂ (ಚ). ಈ ಭಾಗ (ಖಗ) ಗಳಲ್ಲಿ, ೧೯ ನೆಯ ಪಂಕ್ತಿಯಲ್ಲಿ † ಗುರುತಿನಿಂದ ತೋರಿಸಿರುವ ಕಡೆ ಸೇರಿದೆ; ವಾಕ್ಯಗಳ ಕ್ರಮದಲ್ಲಿ ವ್ಯತ್ಯಾಸವೂ ಇದೆ. ಈ ಮಾತೃಕೆಗಳ ಪಾಠವನ್ನು, ಅಲ್ಪ ಭೇದಗಳಿಗೆ ಲಕ್ಷ್ಯಕೊಡದೆ, ಈ ಮುಂದೆ ಕೊಟ್ಟಿದೆ: ಸವಿಯಿಸುವ ಪಯಂ ತವರಾಜಂ ತನಿವಣ್ಗಳು - - - ನಾಲಗೆಯೇಱು ಹೂಸುವ ಚಂದನ - - - ತಳಿವಾಲಿನೀರ್ಗಳು - - - ಮಂದಾನಿಲಂ ಯಿಂತಿವಱು ಸೊಂಕೆಂಬುದು ಭವಿಗಳಂ ಸೋಂಕಿದ (ಖ : ಗ) ಇಲ್ಲಿಂದ ಮುಂದೆ (ಖ) ದಲ್ಲಿ 'ಶರಣನಂತೆ ಯಿಂತು ತ್ವಕ್ಕು ಚಕ್ಷು ಶ್ರೋತ್ರ ಜಿಹ್ವಾ ಘ್ರಾಣಾದಿ ಪಂಚೇಂದ್ರಿಯಸುಖಂ ಸ್ವೀಕರಿಸದಿಹಳು ಮತ್ತಂ' ಎಂದಿದೆ; (ಗ) ದಲ್ಲಿ 'ಸತ್ಯ ಮತ್ತಂ ಸವಿಯಿಸುವ ಪಯಂ . . . ನಾಲಗೆಯೆರು ಮತ್ತಂ' ಎಂಬುದು ಪುನರುಕ್ತವಾಗಿದೆ. [4] ರ (ಕಜ). [5] ಮತ್ತಂ (ಕ). [6] ಸವಿ (ಕಜ). [7] ತಂಗಯ್ಯದಾಸ್ವಾದಿಸಿದ (ಕ). [8] ಮಕರಂದ (ಕಜ). [9] ದೆ (ಕಜ). [10] ಗ್ರಾಹಿ (ಕ), ಗ್ರಹಿ (ಖಚ), ಗ್ರಾಣಿ (ಗ). [11] ತೆ ನಾಸಿಕದೇಱು (ಖ), ತಭಿಮಾನದೇಱು (ಗ), ಘ್ರಾಣದೇಱುಂ (ಚ). [12] + ನ ಹೂವ್ವಿ (ಖಗ), ನ ಹೂವಿ (ಚ). [13] ಮನದೊಳಗೆ (ಖ). [14] (ಖ) ದಲ್ಲಿಲ್ಲ.

ದಿಂ[1]ದೇರ್ವಡೆದು- ಏಸುವಡೆದ[1] ಪುಲ್ಲೆ[2]+ ಬಸವಳಿದು ಬಿರ್ದಂತೆ ಕೊಳನ ತಡಿಯಣ ಬಾಲಚೂತದ ಸೆಳಲ ಶಶಿಕಾಂತದ [3]ಶಿಲಾತಳ[3]ದೊಳ್ ಪೊರಳುತಿರ್ಪ ಪರವೆಗೆ ಅಶೋಕೆ [4]ಸ[4]ಶೋಕೆ ಮಾಮರಂ ತೋಮರಂ ಬೆಳ್ದಿಂಗಳು ಬಿಳಿಯಿಂ[5]ಗಳಂ[5] ಕೊಳಂ ಕೊಳುಗುಳಂ [6]ಸಸಿ[6] ಬಿಸಿ ಲತೆ ಅಸಿಲತೆ ಕದಳಿ ಕದಳೀ[7]ಘಾತಂ[7] [8]+ [9]ಫಳಂ ನಿಷ್ಫಳಂ[9] ಕಾ[10]ವಂ ದಾವಂ[10] ವಸಂ [11]ಪಿತೃವನವಾಗಿ[11] ಶಿವಭಕ್ತಿಹೀನಂಗೆ ಜ[12]ಗಂ[12] ಮುಳಿವಂತೆ ಸೌಂದರನಿಲ್ಲದ ಪರವೆಗೆ [13]+ ಚರಾಚರ ವಸ್ತುಗಳು ಮುಳಿಯೆ ಮಱುಗುತ್ತಿರ್ದಪಳು-

[14]ಇದಂ[14] ನೋಡದೆ ಜವ್ವನಮಂ ಜಾಱಿಸಿ ಸುಖಮಂ ಸೂಱೆಗಳೆದು ರೂಪಂ ರೂ[15]ಪು[15]ಗೆಡಿಸಿ ಮನಮಂ ಮಱುಗಿಸಿ ಚಿತ್ತಮಂ ಚಿವುಂಟಿ ಕರಣಂಗಳಂ [16]ಖಂಡಿ[16]ಸಿ ಸೌಕುಮಾರ್ಯಮಂ ಸಡಿಲ್ಚಿ [17]ಜ[17]ಸಕ್ಕೆ ನಗೆಗೆಡೆಮಾ[18]ಡಿ[18] [19]ವನಕ್ಕೆ ಹಗೆಮಾಡಿ[19] [20]+ ಹೋದಂ ದೇ[21]ವ ಬಿನ್ನವಿಪಡಪರಾಧವಿನ್ನು[21]ವನೇಕವುಂಟು ಆದೊಡಂ ಗಂಗಾಧರಾ ಚಂದ್ರಶೇಖರಾ ಕರುಣಾಕರಾ [22] + ಭಕ್ತಜನ ಬಾಂಧವಾ ಅರ್ಧನಾರೀಶ್ವರಾ ನಿಮ್ಮಡಿಗಳ್ ಬಿಜಯಂಗೆಯ್ಯು[23]ಲವಳ್[23] ತಾಪಂ ಪಾಱಿ ಪೋದುದು [24] + ಇನ್ನಾದೊಡಂ ದೇವಾ ಸೌಂದರನಂ ಕಳುಪಿ ಎನ್ನ ಮಗಳ ಹರಣಮಂ ಕಾ[25]ವು[25]ದೆಂದು ಬಿನ್ನವಿಸೆ ಪನ್ನಗಧರಂ ಕೇಳ್ದು- ಅಂಜದಿ

---

[1] ದೇರ್ವಡದಸುವಿಡಿದು<ದ>(ಕಜ), ದೇರ್ವಡೆದಸುವಿಡಿದ (ಖ), ದೆರುವಡದೆಸುವಡೆದ (ಗ), ದೌಯೇಱುವಡದು ಯೇಸುವಡದ (ಚ). [2]+ಯುಂ (ಖ), ಯಶಿಶು (ಚ). [3] ಶಿತಳದ ಮಹಾಸ್ಯೈತ್ಯದೊಳು (ಚ). [4] ಶ (ಖಗಚ). [5] ಗಳು (ಕ), ಗುಳಂ (ಚಜ). [6] ಶಶಿ (ಕಗಚಜ). [7] (ಗ) ಪಲ್ಲಿಲ್ಲ. [8]+ಸಂಪಗೆ ಪಗೆ (ಕ). [9] ಫಳಂ ನಿಃಫಳಂ (ಕಚ), ಪಳಂ ಫಳ ನಿಷ್ಫಳಂ (ಖ), ಫಲಂ ಪಳಂ ನಿಷ್ಪಳಂ (ಗ), ಪಲಃ ನಿಃಫಲಂ (ಜ). [10] ಮಂ ದಾಮಂ (ಕಖಗ). [11] ಹೃದ್ವನವಾಗಿ (ಕ), ಹಗೆಜನಾವಾಶಿ (ಖ), ಹೃತವನಮಾಗಿ (ಗ), - - - ಮಾಗಿ (ಚ). [12] ನಂ (ಜ). [13]+ಸ (ಖಜ). [14] ಚಪಳೆಯಿಂದ (ಚ). [15] ಹು (ಖಗಚ). [16] ಕಂಡಿ (ಖಗ), ಕಂದಿ (ಚ). [17] ಜವ್ವ (ಖ). [18] ಡಿದಂ (ಕ). [19] (ಖಗ) ಗಳಲ್ಲಿಲ್ಲ. [20] + ಸೌಂದರಪೆರುವಾಳೆ (ಚ). [21] ವಂಗೆ ಬಿನ್ನೈಸದಿನ್ನಪಾರ (ಖ). [22] + ಶಂಕರಾ ಅಭಯಕರಾ (ಕ), ಅಭಯಕರಾ (ಚ). [23] ಲುಳ್ಳ (ಕ). [24] + ಬದುಕಿದಳು (ಚ). [25] ಯ್ಯುವ (ಜ).

ರಂಜದಿರು ಸತಿಯರ್ಗೆ ಧೈರ್ಯಂ ಬೇ[1]ಳ್ಪುದು- ಇಂತಲ್ಲಲ್ಲ[1] [2]ಬೇಗ[2]ವ್ರೊಳಬೀಳ ಲಾಗ[3]ದು- ಆತ[3]ನಂ ಕಳುಪಿದಪೆವು- ಅವಂ [4]ಬೇಱು[4] ಬಂದೊಡೆ ತೆಱಹುಗುಡದೆ ಕದವಂ ತೆಱೆಯದೆ ಕಟಕಿಯನಾಡಿ ಕ[5]ಳೆವು[5]ದು- ಆಂ [6]ಬಳಿಕ[6] ಬಂದು ಪರವೆ ನಾಚಿಯ[7]ರುಮ್ಮಳ[7]ಮಂ ತೀರ್ಚಿ[8]ದಪೆವೆಂ[8]ದು [9]ಬೆಸಸಿ[9] ಭಕ್ತಜನವತ್ಸಲನನವರತ ಲೀಲಾಲೋಲಚಿತ್ತಂ ದೇವಾಲಯಕ್ಕೆ ಬಿಜಯಂಗೆ[10]ಯ್ದಂ-[10]

ಇತ್ತಲು ರಂಗಮಂಟಪದೊಳಗೆ [11]ತನ್ನ[11] ಬರವೇ ಹರಣವಾಗಿ[12] + [13]ತಱಿಗೆಲೆ [14]ಗಿಱಿಕೆನೆ[14] ಕಱಿಕಂಠಂ[13] ಬಂದನೆಂಬ ಭಾವಕ್ಕೆ ವ್ಯೈ[15]ಯು[15]ಕ್ಕಿ ನಿಂದ ನಂಬಿ[16]ಯ[16]ಲ್ಲಿಗೆ ನಡೆತಂದು- ಎಲೆ ಮಗನೆ ಮುನಿಸುಮೂ[17]ದಲೆಗಳ[17] ನೇನೆಂಬೆಂ ವಿಳಾಸಿನಿಯರ [18]ವೀರಮಂ[18] ತಾಯ ಕಟಕಿಯಂ ಪರಿಜನದ ಪುರುಡಂ ಪರವೆಯ[19]ರ[19] [20] + ಮುನಿ[21]ಸಂ[21] ಪೇಳಲು ಪವಣಿಲ್ಲವಾದೊಡಂ ನಂಬಿ [22]ನೀಂ[22] ಕಾರಣಂ ಗಿರಿಜೆಯನಗ[23]ಲ್ದ ಅ[23]ಭಿಮಾನಮಂ ನೋಡದೆ [24]ನುಡಿಯ ಕರ್ಕಶಮಂ[24] ಸೈರಿಸಿ ವೇಶ್ಯಾಗೃಹವೆನ್ನದೆ ನಡೆದುಪೋಗಿ ಪರವೆ ಯರಂ ಬೇಡಿಕೊಂಡು ಬಂ[25]ದೆವು- ಇ[25]ನ್ನೊಂ[26]ದು[26] ತೊಡಕಿಲ್ಲ ನಡೆ ಮಗನೆ ಪೋಗೆಂದು-[27]ಬೆಸಸಿ[27] ಹರಂ ಶಿವಲಿಂಗದೊಳ್ ಪು[28]ಗುವುದುಂ[28] [29]ಸೌಂದರಂ ಸರ್ವಸಂಭ್ರಮದಿಂ ಸಿಂಗರಂ ಮಾಡಿ ದರ್ಪಣಮಂ ನೋಡುತ್ತೊಂದು[29]

---

[1] ಳ್ದುದಲ್ಲದೆ (ಖ), ಳ್ಪುದಲ್ಲಲ್ಲ (ಗಜ). [2] (ಖ) ದಲ್ಲಿಲ್ಲ ; ಬೇಗಬೇಗ (ಗ). [3] ದವ (ಗ), ದು ಅವ (ಚ). [4] ಬೇಗ (ಕ), ಬೆರೆ (ಗ) ; (ಖ) ದಲ್ಲಿಲ್ಲ. [5] ಳವು (ಕಚ), ಳುಪೂ (ಖ), ಳುವು (ಗ), ಳುಹುಲು (ಜ). [6] (ಗ) ದಲ್ಲಿಲ್ಲ. [7] ರಂಮಂಗ (ಖ), ರುಂಮನ (ಗ). [8] ದಪೆನೆಂ (ಗಜ) ; ಪರಿಣಾಮಮಂ ಮಾಳ್ಪೆವೆಂ (ಚ). [9] (ಖ) ದಲ್ಲಿಲ್ಲ. [10] ಯ್ಯಲ್- (ಖಗ). [11] ಹರನ (ಚ). [12] + ರ್ಪ (ಖ), ರ್ದ (ಜ). [13] ತಱಿಕಟ ಗಾಡುವ ನಂಟ (ಖ). [14] ಗಿರಿಕ್ಕೆನೆ (ಗ), ಕಿಱಿಕೆನೆ (ಜ). [15] ವು (ಕ), ಯಿ (ಖಗಚ). [16] ಯಂಣನ (ಕ). [17] ವಳಿಸುವವಳ (ಚ). [18] ವಿರಂ (ಕಗ), ವಿರಹಂ<ಹ> (ಖಜ). [19] (ಗಜ) ಗಳಲ್ಲಿಲ್ಲ. [20] + ಕಡು (ಖಗಚ). [21] ಸುಂ (ಗ), ಸದ (ಜ). [22] ನಿಂನ (ಕಚ) ; ನಿಂ (ಖಗಜ). [23] ಲ್ದಿನ (ಕ). [24] ವಿಡಿ(?)ಯ ತರ್ಕನಿಂಮ್ಮಂ (ಖ). [25] ದಪೆಯಿ (ಕ). [26] ದೂ (ಜ). [27] (ಖ) ದಲ್ಲಿಲ್ಲ. [28] ಗಲು (ಖ), ಗಲುಂ (ಗ). [29] ಈ ಭಾಗ (ಗ) ದಲ್ಲಿಲ್ಲ.

ಕಣ್ಣಿಲ್ಲದುದಂ ಕಂಡು ಕನ್ನಡಿಯಂ ಬಿಸು[1]ಟ್ಟು[1] ಹರನ ಚರಣದೊಳ್ ಪೊರಳ್ದು ಪಲುಂಬಿ [2]ಪಳವ[2]ಸಿ ದೇವಾ[3]+ ಕುರುಡನಂ ಕಂಡೊಡೆ ಪರವೆ[4]ಯೀ ಕೊಲಿ[4]ವಳು [5]+ಕರುಣಿಸೆಂದು ತ[6]ನ್ನೊಡನೆಯ[6] ಸಲುಗೆ[7]ಯ[7] ಮು[8]ನಿಸಿಂ[8] ಬಾಲಭಾಷೆ[9]ಯಿ[9]ಂದುಸುರ್ವ ನುಡಿಯ [10]ಲಲ್ಲೆಯುಂ[10] [11]ಅ[11]ನುತಾಪದಾಟ ಕೋಟಲೆ[12]ಯುಂ[12] ವಿಾಱು ನುಡಿವ ಮುಗ್ಧತೆ[13]ಯುಂ[13] [14]+ ಶಿವನ ಕಿವಿಗಿ[15]ನಿ ದಾಗೆ[15] [16]+ವಿನೋದದಿಂ [17]ಶಿವಂ[17] ಸುಮ್ಮನಿರೆ ನಂಬಿಯಣ್ಣನಱಿದು ಕರುಣದ ಸುತ್ತಿನಂತೆ ಸತ್ಯದ ಸಾಲದಂತೆ ಭಕ್ತಿವನಿತೆಯ ಕರ್ಣಪತ್ರದಂತೆ-[18]ಇರ್ದ[18] ಪ್ರಮಾಣಪತ್ರಮಂ[19]+ಬೇಡೆ ಹರುಷದಿಂ ಹರಂ ಕಣ್ಗೊಟ್ಟು ಕಾರುಣ್ಯಪ್ರಸಾದಮಂ ಕೃಪೆಯಿಂದಿತ್ತು ತುಂಬುರ[20]ನ[20]ನೊಡಗೂಡಿ ನಂಬಿ ಯಣ್ಣನಂ ಕಳುಪೆ ೬೦

ವಿಳಾಸದಿಂ ನಡೆತಂದು ಪರವೆಯರ ಬಾಗಿಲೊಳ್ ನಿಂದು ಕದವಂ ತೆ[21]ಗೆ[21] ಸೌಂದರಪೆರುಮಾಳ್ ಬಂದನೆಂದು ತುಂಬುರಂ ನುಡಿ[22]ಯೆ ಒ[22]ಳಗಿರ್ದ ವಿಳಾಸಿನಿ ಯರು ಸೌಂದರನೆಂದಿದಾರಿಲ್ಲಿಗೇಕೆ ಬಂದಂ ಪರವೆನಾಚಿಯರ್ಗೆ ಸಮಯ [23]ವಿ[23]ಲ್ಲಂ ಸಂಕಿಲಿ[24]+ಯಡಿಯರ್ಗೆ ಸಂಬಂಧವಿಲ್ಲಂ [25]ಚೆಟ್ಟಿಗುತ್ತರ್ಗೆ[25]

---

1 ಟು (ಖಚಜ). 2 ಹಳಹಳಿ (ಖ). 3+ ದೇವಾ (ಖ). 4 ನಗು (ಖ), ಕೊಲು (ಗಚ). 5+ ಕರುಣಿಸು (ಖಗ), ಯಿಂದು ಕರುಣಿಸು (ಚ). 6 ನ್ನ ವೊಡೆಯನ (ಚ). 7 ಯಿಂ (ಕ), ಇಂ (ಜ). 8 ಳಿಸಿಂ (ಕ), ಳುಸುಂಬಾಗಿ (ಗ). 9 ಯ (ಜ). 10 ಲಲ್ಲೆಯಿಂ (ಕ), ಕಱಿಣರವಮಂ (ಕ), ಲಲ್ಲೆಯಂ (ಗ), ಕಱಿಣಮಂ (ಚ). 11 ದ (ಕಜ). 12 ಯಿ (ಕ), ಯಿಂ (ಖ), ಯ (ಚ). 13 ಯಿಂ (ಕಖ), ಯಂ (ಚ). 14+ ಕಂಣು ನಿವಿತ್ಯ ನಾಟಿಯ ರಾಗಮಂ ರಾಗದಿಂದಂ ಆಳಾಪಮಂ ಮಾಡಿ ತ್ರಿಚಕ್ಷುವೆ ಪಂಚಾದಸಚಕ್ಷುವೆ ವಿಶ್ವತಶ್ಚಕ್ಷುವೆ ಯೆಂದು ಅತ್ಯಂತ ನವೀನದಿಂ ಮಿಗೆಮಿಗೆ ಮಾದೂರ್ಯದಿಂ ಪಾಡೆ (ಚ). 15 ನಿದಾಗಿ (ಖಚ), ದಿರಾಗೆ (ಗ). 16+ ಮಹಾಸುಖಮಾಗಲು (ಚ). 17 (ಚ) ದಲ್ಲಿಲ್ಲ. 18 (ಖ) ದಲ್ಲಿಲ್ಲ. 19+ ಮತ್ತೆಮತ್ತೆ (ಖ), ಮತ್ತೆ (ಗಚ). 20 (ಖಗ) ಗಳಲ್ಲಿಲ್ಲ. 21 ಱೆ (ಖಚ), ರೆ (ಗ). 22 ಯಲೊ (ಖಗ), ಯಲು ವೊ (ಚ). 23 ವ (ಜ). 24+ ನಾಚಿ (ಕ). 25 ಸೆಟ್ಟಿಗುಪ್ತರ್ಗೆ (ಕ), ಸೆಟ್ಟಿನೃಪಂಗೆ (ಖ), ಸಿಟ್ಟುಗುಕ್ತರ್ಗೆ (ಗ), ಬಟ್ಟಗುತ್ತರ್ಗೆ (ಚ), ಬಟ್ಟಿಗುತ್ತರ್ಗೆ (ಜ).

[1]ಸೇವ್ಯವಲ್ಲದ[1] ಕದಂ ದೇ[2]ವ[2]ವಿಟರ್ಗೆ ಮಾ[3]ಱಂ[3]ಕದ ಕದಂ [4]+ ಚಳಚಿತ್ತರ್ಗೆ ಬಿಂಕದ ಕದಂ ಸತ್ಯಹೀನ[5]ರ್ಗೆ[5] [6]ಸೋಂಕದ[6] ಕದಂ ಅಳಿಮನದವರ್ಗೆ ತೆಗೆವ ಕದವಲ್ಲೆಂದು ಪಲ[7]ಕೆಲವು[7] ಕಟಕಿಗಳನಾಡೆ ನಂಬಿಯಣ್ಣಂ ಭಂಗಿತನಾಗಿ ಆನೆ[8]ಗಂಕುಶಂ ತೋ[8]ಱದಂತೆ ಕೆರಳ್ದು ಕಿ[9]ನಿಸಿ[9] ಕಿಡಿಕಿಡಿ[10][ವೋ][10]ಗಿ ಸಜ್ಜಿಸೆ ತಿರುಗಿ ಶಿವಾಲಯಮನೆಯ್ದಿ ಕೂಡಹಡೆಯದ ಕಡುಗೋಪದಿಂ ಕಣ್ಗಾಣದೆ ಸೋಪಾನವನೆಡಹುತುಂ ತಾಗುತುಂ ಪರಿತಂದು- ಎ[11]ಲೆಯೆ[11]ಲೆ ವಿಷಧರಾ ಎ[12]ಲೆಯೆಲೆ ಶೂಲಿ[12] [13]+ ಎಲೆ[14]ಯೆ[14]ಲೆ ಸರ್ಪಾಭರಣಾ ಎಲೆ[14]ಯೆ[14]ಲೆ [15]ಕ[15]ಪಾಲಿ ಎಲೆ[14]ಯೆ[14]ಲೆ ಶಿಶು[16]ವಧೆಕಾಱಾ[16] [17]ಎಲೆಯೆಲೆ[17] ಕರುಣವಿಲ್ಲದ ಕರ್ತಾ [18]ಎನ್ನೈ[18] [19]ಇದೇ[19]ನಂ ಮಾಡಿದೆ ನಂಬಿದವರಂ ನಡು[20]ನೀರೊಳ[20]ದ್ದುವರೆ ತಲೆಯೊಳ್ ಕಯ್ಯಿ[21]ಡುತೆ[21] ಗೋಣಂ ಕೊಯ್ವರೆ ಕೊಡು ಕೊಡು ಪತ್ರಮಂ [22]ಕೊಂಡ[22]ಲ್ಲದೆ ಬಿಡುವನಲ್ಲಂ ಇಂದಿನ ಪರಿಯೆಂದಿ[23]ನ ಪರಿಯಲ್ಲಂ[23] ತಂದೆ ನಿನಗೆ ಶಂಕರನೆಂದು ಪೆಸ[24]ರ್ಗೊಟ್ಟವರಂ[24] ಕಂಡೊಡೆ ತಕ್ಕುದಂ ಪೇಳ್ವೆಂ [25]ಸಾಲ್ಗು ಸಾಲ್ಗುಮೆನುತುಂ[25] [26][ಅ]ಸ್ವಾಧೀನದಿಂದಳಲ್ನುಡಿಯಂ[26] ನುಡಿವ ಮಗನಂ [27]ತಾನೆ[27] ಬಂದು ಕಳುಪಿದಪೆಂ ಕಂಡಾ [28]+ ನಡೆಯೆನುತ್ತುಂ ಪೋಱಮಟ್ಟು-

---

1 - - - ಲ್ಲದಿ (ಕಖ), - - - ಲ್ಲವೀ (ಗ) ; ಸಮಯವಿಲ್ಲದ (ಚ). 2 ವಾ (ಖ). 3 ರಾಂ (ಕ). 4 + ಸಂ (ಖಚ). 5 ರಂ (ಖಜ), ರ (ಗಚ). 6 (ಚ) ದಲ್ಲಿಲ್ಲ. 7 ಉ (ಖ), ವು ಕೆಲವು (ಗ), ವುಂ (ಚ). 8 - - - ದೋ (ಖ), ಗೆಶಿ<ಕೆಸಿ>ಡಿಲ್ದೊ (ಗಚ). 9 ಗ್ಗಿಸಿ (ಖ), ನಿಸಿನಿಂ (ಗ), ಲಿಸಿ (ಚ). 10 ಯೋ (ಕಖಚಜ), ಯಾ (ಗ). 11 (ಖಗ) ಗಳಲ್ಲಿಲ್ಲ ; ಲ (ಚ). 12 ಲೆ ತ್ರಿಪುರಾಂತಕಾ (ಖ), ಲೆ<ಲ>ಲೆ ತ್ರಿಶೂಲಿ (ಗಚ). 13 + ಯೆಲೆ ತ್ರಿಯಂಬಕಾ ಯೆಲೆ ಭರ್ಗಾ ಯೆಲೆ ಭೀಮಾ (ಖ). 14 (ಖಗಚ) ಗಳಲ್ಲಿಲ್ಲ. 15 ಕಾ (ಕಖ). 16 ವಧೆಕಾಜಿ (ಕ), ವೆದೆಗಾಱಾ (ಖ), ವೇದೆಕಾರ (ಗ), ವೆಧೆಕಾಱನೆ (ಚ). 17 (ಖ) ದಲ್ಲಿಲ್ಲ ; ಯೆಲೆಲೆ (ಗಚ). 18 ಎನ್ನೈಯ್ಯಾ (ಖ), ಯೆನಯ್ಯ (ಗಚ). 19 ಏ (ಖ). 20 ನೀರಲ (ಕ), ಗಡಲೊಳ (ಖಗಚ). 21 ಟ್ಟು (ಖಗ). 22 ಕೊಟ್ಟ (ಗ). 23 ನಂತಲ್ಲ (ಗ). 24 ಗೊಂಡರನಾಂ (ಖ). 25 (ಚ) ದಲ್ಲಿಲ್ಲ. 26 ಅತ್ಯಂತ ಸಂತಾಪದಿಂದಳಲುನುಡಿಯಿಂ (ಕ), ಸ್ವಾಧೀನದಿಂದಳ - - - (ಖ), ಸಾದಿನದಿದಳ - - - (ಗ), ಯಿಂತೆಂದು ಸ್ವಾದೀನದಿಂದಳಲುನುಡಿಯಂ (ಚ), ಸ್ವಾಧೀನದಿಂ ಬಳಲ್ನುಡಿಯ (ಜ). 27 ನಾವೆ (ಜ). 28 + ನೆಡೆ (ಖಗ), ನಡೆ (ಚ).

ಅಡಿಗಡಿಗೆಡೆಯಾಡಿದೊಡೆ ನಂದೀಶನೊಳಗಾದವರ್ ನಂಬಿಗೆ ಮು[1]ನಿ[1]ವರ್ ಮುನಿದಿರ್ದನೊ[2]ರ್ವಂ ಕಲಿಕಾಮನೆ[2] ಸಾಲ್ಗುವೆಂದು- ಆರುಮನೊಲ್ಲದೆ ನಂಬಿಯಣ್ಣನ ಕೈವಿಡಿದು ಪರವೆಯರ ಪ್ರಾಣಮಂ ಪಿ[3]ಡಿ[3]ತಪ್ಪಂತೆ ನಡೆತಂ[4]ದ[4]ಮೃತಸ್ವರದಿಂ ತೆ[5]ಗೆ[5] ಕದವನೆನಲ್- ಅಱಿದು ಮುಚ್ಚುಳಂ [6]ತೆ[6]ಱೆದು ಪರವೆಯರ ಮಾತೆ ಮಯ್ಯಿಕ್ಕಿ ನಿಂದು ತಂದಿಕ್ಕಿದ ಕನಕಸಿಂಹಾಸನದೊಳ್ ಬಿಜಯಂಗೆಯ್ದು ಸೌಂದರನ ಕಯ್ಯೊಳ್ ಪದತಳಮನೊತ್ತಿಸಿಕೊಳುತ್ತೆ ಕರೆ ಪರವೆಯರನೆನೆ ವಿಳಾಸಿನಿಯರ್ ತ[7]ಮತಮ[7]ಗೆ ಪರಿದು ಸೌಂದರಂ ಬಂದ ಪರಮೋತ್ಸಾಹಮಂ ಪೇಳಲ್- ಇರ್ದ ಪರಿಯೊಳಿರ್ದು ಕನ್ನೆಯರ ಕೈವಿಡಿದು ಕೋಲ್ ತಾಗಿದ ಹುಲ್ಲೆಯಂತೆ ಹಸಿದ ಹಂಸೆಯಂತೆ ಬಳಲ್ದ ಚಕೋರಿಯಂತೆ [8]ಮೆಲ್ಲ[8]ಮೆಲ್ಲನೆ ನಡೆತಂದು ಮೃಡಂಗೆ ಮಯ್ಯಿಕ್ಕಿ ಕೆಲಸಾರ್ದು ನಿಂದು ತಲೆವಾಗಿರ್ದ ಪರವೆಯರಂ ಕಂಡು ನಂಬಿಯಣ್ಣನ ಕರಣಂ [9]ಕೂಳ್ಗುದಿ[9]ಗೊಂಡು ಪಿಡಿದಿರ್ದ ಶಿವನ ಮೆಲ್ಲಡಿಯಂ [10]+ ಬಿಟ್ಟು ದೈನ್ಯದೃಷ್ಟಿಯಿಂ ಶಿವ[11]ನ ಮೊಗಮಂ[11] ನೋಡುತ್ತಿರಲಱಿದು ವಿರೂಪಾಕ್ಷಂ ಪರವೆ[12]ಯರುಮಂ ನಂಬಿಯುಮಂ[12] ಸೆಜ್ಜೆಯ ಮನೆಯೊಳೊಂದುಗೂಡಿ ಸುಖದೊ[13]ಳ್ ಬೆರಸಿ[13] [14]ನಲವಿಂ ಪರಸಿ[14] ಕಾರುಣ್ಯಾಪಾರಾವಾರಂ ಶರಣಜನಪುಣ್ಯಫಲಂ ಭಕ್ತಜನಭಾಗ್ಯೋದಯಂ ಭೃತ್ಯಕುಲನಿತ್ಯವರದಂ ಕಿಂಕರನಿವಹಶಂಕರಂ ಪಂಚಾಕ್ಷರೀಸುಖನಿವಾಸಂ [15]ತಿರುಗಿ[15] ತಿರುವಾರೂರ ಶಿವಾಲಯಕ್ಕೆ ಬಿಜಯಂಗೆಯ್ದಂ- ಇತ್ತಲು [16]ಪರವೆಗೆ ನಂಬಿಗೆ[16] ಪಲವು ಕಾಲದಗಲ್ಕೆ [17]ಪಯ್ಯನಾಗಿ[17] ಪ್ರಣಯಕಲಹಂ ಕಾಲೂಱಿ ಸುಖದ

---

1 ಳಿ (ಕಜ). 2 ನೊರ್ವನೆ ಕಲಿಕಾಮ<ಮರೆ> (ಕಜ), ರ್ವಂ (ಖ), ರ್ವಂ ಕಲಿಕಾಮ (ಗ), ಬ್ಬ ಕಲಿಕಾಮನೆ (ಚ). 3 ಡಿದು (ಕ). 4 ದನ (ಕ). 5 ಱೆ (ಖಚ), ರೆ (ಗ). 6 ದೆ (ಕಗ). 7 ನತನ (ಚ). 8 (ಗಚ) ಗಳಲ್ಲಿಲ್ಲ. 9 ಕೊಳ್ಗುದಿ (ಕ), ಗಳೊಗ್ಗುಡಿ (ಖ), ಕೋಳ್ಗ್ಗುದಿ (ಗ), ಕೊಗ್ಗುದಿ (ಚ). 10 + ಭೋಂಕನೆ (ಖಚ), ಬೊಂಕನೆ (ಗ). 11 ನ (ಖಗ), ನಂ (ಜ). 12 ಯರಂ ನಂಬಿಯನುಂ (ಖ), ಯುಮಂ - - - (ಗ), ಯಂ ನಂಬಿಯಂ (ಚ), ರುಮಂ - - - (ಜ). 13 ಳಿರ (?) ಎಂದು ಬೆಸಸಿ (ಖ). 14 (ಜ) ದಲ್ಲಿಲ್ಲ. 15 ಪರವೆಯರ ಮನೆಯಂ ಪೊಱಮಟ್ಟು (ಖ). 16 ಪರವೆನಂಬಿಗಳ್ಗೆ (ಖಗ), ಪರವೆನಾಚಿಯರಿಂಗಂ ಸೌಂದರಪೆರುಮಾಳಿಗಂ (ಚ). 17 ಯ ಹಯನಾಗಿ (ಖ); ಯಾಗಿ (ಚ).

ಮಳೆ ಕಱೆದು ನೇಹದ ಬಿತ್ತಂಕುರಿಸಿ ತವಕಂ ತಳಿರ್ತು ಸಮಾಸುರಾಗವರಲ್ದು ಪ್ರೇಮಾಲಿಂಗನದೊಳ್ ಶಿವಾರ್ಪಿತಂ ಸಿಲ್ಕಿ ಸಫಲವಾಗಲ್- ಇಂತು [1]ಕಾಮಸುಖಂ[1] ಕಾಮಾರಿ[2]ಗೇಱುತ್ತಮಿರೆ[2] ಪಲಕೆಲವು ದಿವಸಂಗಳ್ ನಿಮಿಷಂಗಳಾಗೆ ಸುಖದೊಳಿರ್ದು-

ಒಂದು ದಿವಸ[3]ವು[3]ದಯಸಮಯದೊಳುಪ್ಪರಿಗೆಯ ಮೇಲೆ ಸಿಂಹಪೀಠದೊಳಿರ್ದು ವಿಳಾಸಿನಿಯರಿಂ [4]ಸಿರಿ[4]ಮುಡಿಯಂ ಸಾಗಿಸಿಕೊಳುತ್ತಿರಲ್- ಅಲ್ಲಿಗೆಂದಿಸಂದದೊಳ್- ಆಗಮಸ್ಥಾ[5]ನದೊ[5]ಳಿಟ್ಟ ವಿಭೂತಿಯ ತೊಟ್ಟ ರುದ್ರಾಕ್ಷಿಯ ಹೊದೆದ ಧವಳೋತ್ತರೀಯದ ಉಟ್ಟ ತಳಿ[6]ರ್ಗಾಸೆಯ[6] ಇ[7]ಕ್ಕಿ[7]ದ ಯಜ್ಞೋಪವೀತದ ಸುಲಿಪಲ್ಲ ಶಾಂತಿಮುಖದ ಶೈವಶೃಂಗಾರಂ ಸರ್ವಾಂಗದೊಳ್ [8]ಬ[8]ಳೆಯೆ ಶಿವಾಗಮಂ ಮೂರ್ತಿಗೊಂಡಂತೆ ರು[9]ದ್ರಯಜ್ಞಂ[9] ರೂಪುಗೊಂಡಂತೆ ಶಿವಾರ್ಚನೆ ಅವಯವಂ[10]ಬಡೆದಂ[10]ತೆ ಏಕನಿಷ್ಠೆ ಸಾಕಾರವಾದಂತೆ ಸೋಮಾಸಿಮಾ[11]ರರು[11] ಮೆಲ್ಲಮೆಲ್ಲನೆ [12]ಭದ್ರದ ಮೇ[ಗ][12] ಬಂದು ನಂಬಿಯಣ್ಣಂಗೆ ಮಯ್ಯಿಕ್ಕಿ ನಿಂದು ಕ[13]ರಂಡ[13]ಗೆಯೊಳಗಣಿರವಂತಿ[14]ಯ[14] ಮಾಲೆ[15]ಗಳಂ[15] ವಿಳಾಸಿನಿಯರ ಕಯ್ಯೊಳ್ ನೀಡಿ ಹೆಱಸಾರ್ದು ಕೈಮುಗಿದು ನಿಲೆ ಸೌಂದರನವರಂ ಕಂ[16]ಡು- ಇವರಾರೆಂ[16]ದು ಪರವೆಯರಂ ಕೇಳಲ್- ಆನಱಿಯೆಂ ನಿಮ್ಮಡಿಗಳೆ[17]ನ್ನಂ ತೊಱೆದಿ[17]ರ್ದ ಮೂಱು [18]ಬರಿಸಂ[18] ಬಂದೊಂದು [19]ದಿನಕ್ಕಂದಂದಿಂಗ[19]ಧಿಕತರಮಾಗಿ [20]ಪೊಸ[20] ಪೂವಂ [21]+ ಭಕ್ತಿಯಿಂ

---

[1] (ಖಚ) ಗಳಲ್ಲಿಲ್ಲ. [2] ಗೆಱಗುತ್ತಿರೆ (ಖ); ಗೆ ಸರ್ವಸುಖಾರ್ಪಿ × ಯೇಱುತ್ತಮಿರೆಯಿಂತು (ಚ). [3] ದು (ಜ). [4] (ಖ) ದಲ್ಲಿಲ್ಲ. [5] ನಂಗಳೊಳಗಿ (ಚ). [6] ದೋರ್ತ್ರದ (ಖ). [7] ಳಿ (ಗ). [8] ಬೆ (ಸ). [9] ದ್ರನಂಗಂ (ಕಗ), ದ್ರಂ ಯಜ್ಞ (ಖ), ದ್ರಯೆ × × (ಚ). [10] ಬೆತ್ತಂ (ಖಚ), ಬೆತಂ (ಗ). [11] ರನಾರು (ಕಚ), ರನಾರ (ಗ); [ಱರು] ? [12] - - - ಮೇಲ್ಗೆ (ಕ), - - - ಮೇಲೆ (ಖಗಜ); (ಚ) ದಲ್ಲಿಲ್ಲ. [13] ರಡಿ (ಖ), ರಡ (ಗಚ). [14] ಗೆ (ಕ); ಯ ಪೂ (ಗಚ). [15] ಯಂ (ಖಚ). [16] ಡಿದಾರು ಎಂ (ಕ). [17] ನ್ನನಗಲ್ದಿ (ಖ), ನ್ನ ಮರ<ಱ>ದಿ (ಗಚ). [18] ವತ್ಸರಂ (ಖಗಚ), ವರುಷಂ (ಜ). [19] ದಿನಕ್ಕೆ ಅ (ಖಚ), ದಿವಸಕ (ಗ). [20] (ಜ) ದಲ್ಲಿಲ್ಲ. [21] + ಯೆನ್ನ ಶಿವಾರ್ಚನೆಗೆ (ಖ), ಲಿಂಗಾರ್ಚನೆಗೆ (ಚ).

ನಡ[1]ಯಿಸುತ್ತಿರ್ದಪ[1]ರೆನೆ ಮನದೊಳ್ ಮೆಚ್ಚಿ ನಾ[2]ಲ್ಕೆರಡು[2]ಸಾವಿರಚ್ಚಂ
ಕುಡಲ್ ಬಯಸಿ ನಂಬಿಯಣ್ಣಂ ತುಂಬುರನ ಮೊಗಮಂ ನೋಡಲ್-

[3]ಅಱಿದು- ಇತ್ತಲು[3] ದೇವ ಬಿನ್ನಪಂ ಬೆಲೆಯುಂ ಬಯಸಿ ಬಂದ ಪೂವಲ್ಲಂ
ನಿಮ್ಮ ತೊತ್ತಿ[4]ರ[4] ತೊತ್ತು ಭೃತ್ಯರ ಭೃತ್ಯನೆನ್ನ ಪೆಸರ್ [5]ಸೋಮಾಸಿಮಾರ[5]
ರೆಂಬುದು- ಈ ಪುರದ ಯೋಜನಾಂತರದೊಳೊಂ[6]ದಂಬರೂರೆಂ[6]ಬಗ್ರಹಾರದೊ
ಳಿರ್ಪೆಂ ದೇವ ಪೊನ್ನಲ್ಲ ಪೂವಿನ ಫಲಂ ಬೇಱಿರ್ದಪುದು- ಆನೊಂದು ಯಾಗಮ
ನೊಡರ್ಚಿ[7]ದಪೆ[7]ನಲ್ಲಿಯುಗ್ರಪೂಜೆಗೆ ಭರ್ಗನಂ ಬಿಜಯಂಗೆಯ್ಸಿಕೊ[8]ಡಲ್ವೇಳ್ಪ[8] ೧೨೦
ದೆಂದು ಮಯ್ಯಿಕ್ಕಿ ಬಿದ್ದಿರಲ್- ಏಳಿರೇಳಿ[9]ರೆ[9] [10]ಪಿರಿದ[10]ಪ್ಪ ಕಾರ್ಯವೆಂದಿರ್ದೆ
ನಿದರ್ಕೆ ಇನಿತು ದಿಸಂ [11]ವೇ[11]ಳ್ಪುದೆ ಶಿವಂ ಬಂದಪಂ [12]ಬೇಗ[12] ಯಾಗಮ
ನೊಡ[13]ರ್ಚುವುದೆಂದವರಂ[13] ಕಳುಪಿ ಸಕಳ ವಿಳಾಸಿನೀ [14]ನರ್ತಕ ನರ್ತನ[14] ಗೀತ
ವಾದ್ಯ[15] + ನೂತನ ವಿದ್ಯಾ[16]ನಿ[16]ರೀಕ್ಷಣ ನಿಕ್ಷಿಪ್ತಚಿತ್ತನುಂ ವಿವಿಧಭಕ್ತಜನ
ಸುವರ್ಣಾರಾಧನತಾತ್ಪರ್ಯ ವಂದನಾಸಕ್ತನುಂ [17]ವಿಭೂತಿವಿಲಸಿತ ಲಲಾಟ
ಪಟ್ಟನುಂ[17] ಸರ್ವಾಭರ[18]ಣಾಲಂಕೃತಸರ್ವಾವಯವನುಂ ಆಚ್ಛಾದಿತದಿವ್ಯ
ದುಕೂಲನುಂ ಅವಷ್ಟಂಭಿತತುರಗರಾಜನುಂ ಸಮು[19]ದಿ[19]ತಧವಳಾತಪತ್ರ[20]ನು
ಮಾ[20]ಗಿ[18] ದೇವರ ದೇವನ [21]ದೇವರಾದಿತ್ಯನ[21] ದೇವರ ಗಂಡನ ಸಕಲದೇವ
ಸಾರ್ವಭೌಮನ [22]+ ತಿರುವಾರೂರರಸನ [23]ಅರಮನೆಗೆ ನಡೆತಂದ[23]ಷ್ಟಾಂಗ

---

[1] ಸುತಿರ್ದಪ (ಖ), ಸುತಿ<ತ್ತಿ>ರ್ದ (ಗಚ). [2] ಲ್ಕೆಂಟು (ಖಗಚ). [3] -ಅದನಱಿದಿತ್ತಲು ಸೋಮಾಸಿಮಾರರಿಂತೆಂದರೆಲೆ (ಖ) ; -ಅದನರಿದಿತ್ತರಿತ್ತಲು (ಗ), ಅವನಱಿದು ಇತ್ತಲಿತ್ತಲು (ಚ). [4] ನ (ಕಖಚ). [5] ಸೋಮಸೀಮ (ಗ). [6] ದು ಅಂಬಲೂರೆಂ (ಕ), ದಬ್ಬಲೂರೆಂ (ಖ), ದಂಬಲೂರಪುರವೆಂ (ಚ), ದಂಬಲೂರೆಂ (ಜ). [7] ದೆ (ಗಚ). [8] ಡಲುವೇಳ್ಪ (ಕ), ಡಲ್ವೇಳ್ದ (ಖ), ಡಲುಪೇಳ್ವ (ಗ), ಕೊಳಲುವೇಳ್ಪ (ಚ). [9] ರೆ ಅಯ್ಯ (ಚ); (ಜ) ದಲ್ಲಿಲ್ಲ. [10] ಬಲ್ಲಿತ (ಖ). [11] ಬೇ (ಖಗಚ). [12] (ಚ) ದಲ್ಲಿಲ್ಲ. [13] ರ್ಚೆಂದು (ಖ). [14] ನರ್ತನ ನರ್ತಕ (ಕಜ), ನೃತ್ಯ (ಖ), ನರ್ತಕ (ಗಚ). [15]+ನೃತ್ಯ (ಕ). [16] ಧ (ಕ). [17] (ಖ) ದಲ್ಲಿಲ್ಲ. [18] ಣದಿವ್ಯಮ× (ಚ); (ಚ) ದಲ್ಲಿ ಮಿಕ್ಕ ಭಾಗವಿಲ್ಲ. [19] ಧ್ರು (ಜ). [20] ನನುವಾ (ಖ), ನುಂಮಾನುಮಾ (ಗ). [21] (ಚ) ದಲ್ಲಿಲ್ಲ. [22]+ಭಕ್ತವತ್ಸಲನೆಂದೆನಿಪ (ಚ). [23] ನ (ಖ).

ಪ್ರ[1][ಣ][1]ತನಾಗಿ ಕೈಮುಗಿದು [2]ನಿಂದು[2] ದೇವ ಶೈವಾಚಾರ್ಯ[3]ಸ[3] ಸೋಮಾಸಿಮಾರನ ಮಹಾಯಾಗಕ್ಕೆ ದಕ್ಷಾಧ್ವರಧ್ವಂಸಿ ಬಿಜಯಂಗೆಯ್ವುದೆಂದು ಬಿನ್ನಪಂ ಮಾಡೆ ಭಕ್ತ[4]+ವತ್ಸಳಂ [5]+ ಮಗನ ಮಾತಂ ಮನ್ನಿಸಿ ಮಹಾಮಹಿಮನೊಂದು [6]ಗುಪ್ತ[6]ವೇಷಮಂ ಕೈಕೊಂಡಧ್ವರಕ್ಕೆ ನಡೆ[7]ತಪ್ಪಾ[7]ಗಳ್-

ಇದೆ ಸಮಯವೆಂದು ನಂಬಿಯಣ್ಣಂ ಚತುರಂಗಬ[8]ಲ[8]ವೆರಸಿ ಪೊಱಮಟ್ಟು ಪೆರುಮಳಲೆಯ ಕುಱುಂಬರ್ ಗುಡಿಯನೆತ್ತಿ ಶಿವನ ಬ[9]ಳಿವ[9]ಳಿಯೊಳೆಯ್ತಂದು ಭಕ್ತರ್ಗೆಱ[10]ಗದ ತನ್ನೊಡನೆಯ ಶಿವಂ ಪೊಱಗೆನೆ ಅಱುವತ್ತು[10]ಮೂವ[11]ರಂ ಪಾಡಿ[11] ಮೆ[12]ಱಿಮಿಂಡರ[12] ಮುಳಿಸಂ ತಿಳಿಪಿ[13]+ ಕೈಲಾಸಕ್ಕೆ ಕಳುಪುತುಂ ಕಲಿಕಾಮ[14]ರ[14] ಮುಳಿಸುಮನನಂತರಂ ಮಾಣಿಸುತುಂ ಬಂದು ತಿರುಚಿಟ್ಟಂಬಲಂ [15]ಚೀಯಾಳಿ[15] ತಿರು[16]ವೈಯಾಱು[16] ತಿರು[17]ವಣ್ಣಾ[17]ಮಲೆ ತಿರು[18]ವ[ರ]ತ್ತೊಱೆ[18] ತಿರು[19]ವಾಸಕ್ಕಾಲು[19] ತಿರು[20]ಚಿಟ್ಟಾನ್ ಪಳ್ಳಿ[20] [21]ತಿರುವರುಫೆ[21]ಯೊಳಗಾದ [22]ಸಮಸ್ತ[22]ಶಿವಸ್ಥಾನಂಗಳಂ ಪೊಕ್ಕು ಬೇಡಿ [23]ಕಾಡಿ ಪಾಡಿ[23]

---

1 ಙ (ಸ). 2 (ಖಚ) ಗಳಲ್ಲಿಲ್ಲ. 3 ನುಂ<ನು> ಸದ್ಭಕ್ತನು<ನಾ> (ಖಗ), × ಸದ್ಭಕ್ತ (ಚ). 4 + ಜನ (ಖ). 5 + ಭಕ್ತಪ್ರೇಮಿ (ಚ). 6 ಗುಪ (ಖಗ) ; (ಚ) ದಲ್ಲಿಲ್ಲ. 7 ವಾ (ಖಗಚ). 8 ಲಂ (ಗಚ). 9 ಳುವ (ಖ); (ಗ) ದಲ್ಲಿಲ್ಲ. 10 - - - ಪೊಱಗೈನೆ - - - (ಕ), ಗದವರ ನೋಡದೆ ಶಿವಂ ಪೊಱಗೆಂದು ನುಡಿಯಲಱುವತ್ತು (ಖ), ಗಡಾತಂನೊಡನೆ ಶಿವನ ಹೊರಗೆನಲರುವತ್ತು (ಗ), ಗದ ತನ್ನೊಡನೆ ಶಿವಂ ಪೊಱಗೆ<ಗೆನೆ>ಅಱುವತ್ತ (ಚಜ). 11 ರಂ ಪಾಡಿಸಿ (ಕಜ), ರುಂ ಮಾಡಿ (ಗ). 12 ರೆಮಿಂಡರ (ಕಗ), ಱಮಿಂಡದೇವರ (ಖ), ಱೆಮಿಂಡರ (ಚಜ). 13 + ಯಾತನಂ (ಖ). 14 ನ (ಗಚಜ). 15 ಚಿಯ್ಯಾಳಿ (ಕಜ), ಚಿಯೊಳಿ (ಖ), ಚಿಯಾಳಿ (ಗ). 16 ವೈಯೆಱ (ಕ), ವೈಯೂರ (ಖ), ವಯೊರೆ (ಗ), ವೈಯಾಱ (ಚ). 17 ವಣ್ಣ (ಖ), ವಣಾ (ಗಚ), ಣಾ (ಜ). 18 ಪೊತ್ತೊಱೆ (ಕ), ವತ್ತೋಱೆ (ಖ), ವತ್ತೊರೆ (ಗ), ವತ್ತೊಱೆ (ಚಜ). 19 ವನಕಾಲು (ಕ), ವನಕ್ಕಾಲು (ಖಗ), ವನಾಕ್ಕಾಲು (ಚ), ವಾನಕಾಲು (ಜ). 20 ಚಿಟ್ಟಾಂಪಲ್ಲಿ (ಖ), ಚಿಟ್ಟಾಂಜಳ್ಳಿ (ಗ), ಚಿಟ್ಟಂಪ × (ಚಿ), ಚಿಟ್ಟಂಬಳಿ (ಜ) ; [ಚೆಂಬೊನ್ ಪಳ್ಳಿ] ? 21 ಪರಿದೊರದೆ (ಕ), ತಿರಿ<ರು>ಪನ್ನಿ (ಖಗ), ××× (ಚ) ; [ತಿರುವದಿಘೆ] ? 22 (ಖ) ದಲ್ಲಿಲ್ಲ. 23 ×ಡಿ (ಚ), ಕಾಡಿ (ಜ).

ಪಡಿವೊಂಗಳಂ ಕೊಂಡು [1]+ ತಿರುಗಿ [2]ಸರ್ವಸಂಭ್ರಮದಿಂ ತಿರುವಾರೂರ್ಗೆ ಬಂದು[2] ಪರವೆಯರೊಳ್ ಪರಮ ಸುಖದಿಂದಿರ್ದು-

ಒಂದು ದಿವಸಂ ಶಿವಾಲಯಕ್ಕೆಯ್ತಂದು ರಂಗಮಂಟಪದೊಳ್ ತುಂಬುರಂ ಮೊದಲಾದ ತಸ್ನೊಡನಾಡಿಗಳಂ ಕೂಡಿಕೊಂಡು- ಅವಿರಳಶಿವಪೂಜಾ[3]ನುರ[3]ಕ್ತಂ [4]ನಂಬಿಯಣ್ಣಂ[4] [5]ಗದುಗಾಟದ ಸದುಗೋಷ್ಠಿಯೊಳಿರೆ[5]ಯಿರೆ ||

ಷೋಡಶ ಸ್ಥಲಂ

---

[1] + ಸೋಮಾಸಿಮಾರರ ಯಾಗದಲ್ಲಿಗೆ ಶಿವನಂ ಬಿಜಯಂಗೈಸಿ ಅವರಿಷ್ಟಕಾಮ್ಯಮಂ ಸಲಿಸಿ (ಖ). [2] (ಚ) ದಲ್ಲಿಲ್ಲ. [3] ಸ (ಕ). [4] (ಚ) ದಲ್ಲಿಲ್ಲ. [5] ಜೂಜಿನ ಗೋಷ್ಟಿಯಿಂ ಗದುಗಿನ ಪ್ರೌಢದ ಶಿವಾಚಾರದೊಳು ಯಿರೆ (ಖ), - - - ಸದ್ಗೋಷ್ಠಿಯೊಳಿರೆ (ಗ:ಜ), ಗದುಗಿನ ಶಿವಪೂಜೆಯೊಳಿರೆ (ಚ).

೧೭ನೆಯ ಸ್ಥಲ

ಧರೆಯೊಳ್[1]ಗೊರ್ವ[1] ಕಾರಣಿಕನೀಶ್ವರನಂ ಸಖಿಮಾಡಿ ಬೇಡುತುಂ
ಸುರತಸುಖಕ್ಕೆ [2]ಕುಂಟ[2]ಣಿತನಕ್ಕೆಡೆ[3]ಯಾಡಿಸಿದಂ ಗಡಂ[3] ಮಹಾ-|
ಪುರುಷನನಾತನಂ ಬಿಡದೆ ನೋಡುವೆನೆಂದೊಲವಿಂದೆ ಚೇರಮಂ
ಪರಮಶಿವಾರ್ಚಕಂ ನಡೆದು ಬಂದನನೂನಪದಾತಿಸಂಕುಳಂ ||

ಬಂದು ತಿರುವಾರೂರನಾನಂದದಿಂ ಪೊಕ್ಕು
ನಿಂದು ದೇವಾಲಯದ ಮುಂದೆ ಹರುಷಂ ಮಿಕ್ಕು |
ಆನೆ[4]ಯುಂ[4] ಭೋಂಕನಿಳಿದೊಳಪೊಕ್ಕು ಚೇರಮಂ
ತಾನೊರ್ಬನುಳಿಯಲೆಲ್ಲರನಿರಿಸಿ ಚೇರಮಂ |
ನಡೆತಂದು ನಂಬಿಯಣ್ಣಂ ತಾನಸದಾರೆಂದು
ಒಡನೆಯವರಂ ಕೇಳ್ದು ಕಂ[5]ಡಾಗ್ರಹಂ[5] ನಿಂದು |
ಏನೆಂದು ಬಂದೆ[6]ನಿಂತೇನಾದುದೆಲೆ[6] ಶಿವನೆ
ಈ ನಿಲವೆ ಹರನನೊಲಿಸುವ ರೂಪು ಶಿವಶಿವನೆ |
ಪೊರೆದರಿಸಿನದ [7]ಕಂ[7]ಪು ನಖರೇಖೆ ನಗೆಮೊಗಂ
ಹರಪೂಜೆ[8]ಯೇಕಿದೇಕ[ಕ್ಕ]ಟಾ[8] ಸೋಜಿಗಂ |
ಎನುತೆ ಕುಳ್ಳಿ[9]ರ್ದು[9] ಚೇರಮನಲ್ಲಿ ತೂಂಕಡಿ[10]ಸೆ[10]
